ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ನವಂಬರ್, ೨೦೦೦ ಸಂಚಿಕೆ 4

★

ನ್ಯಾಯಾಂಗದ ಕ್ರಿಯಾಶೀಲತೆ : ಒಂದು ವಿವೇಚನೆ

★

ಜಾಗತೀಕರಣ ಮತ್ತು ಸಾಂಸ್ಕೃತಿಕ ಗುಲಾಮಗಿರಿ

★

ಹತ್ತನೇ ಪಂಚವಾರ್ಷಿಕ ಯೋಜನೆಯ ಗುರಿ ಅವಾಸ್ತವವಾಗಿದೆ.

★

ಬದುಕಿನಲ್ಲಿ ಪುಸ್ತಕ

★ ಈ ಸಂಚಿಕೆಯಲ್ಲಿ ★

ಈ ಆಕಾಶ ಕಪ್ಪಾಗಿ
ಈ ಭೂಮಿ ಸೀಳಿ
ಎಲ್ಲ ನಿಶ್ಶೇಷವಾಗಲಿ.
ಒಂದೇ ಒಂದು ರಾತ್ರಿಯಲಿ
ಇದೆಲ್ಲ ನಡೆದು ಹೋಗಲಿ.
ಮರು ಮುಂಜಾನೆ
ಹೊಸ ಹಾಡು ಹುಟ್ಟಿ
ಹೊಸ ಹೂವು ಅರಳಿ
ನೋವಿಲ್ಲದ ನಾಡಾಗಿ
ಗರಗಸಗಳಿಲ್ಲದ ಕಾಡಾಗಿ
ಒಂದೊಂದು ಹಕ್ಕಿಗೂ
ಒಂದೊಂದು ತೆನೆ
ಒಂದೊದು ತೆನೆಗೂ
ಒಂದೊಂದು ಲಕ್ಷ ಕಾಳು
ಚೆಲ್ಲಾಡಲಿ
ನಿರಂತರ ಸುಖ
ಮೆರೆದಾಡಲಿ.

–ಕು. ಸ. ಮಧುಸೂದನ

ವಿಚಾರಗಳಿಗೆ ಆಯಾ ಲೇಖಕರೇ ಹೊಣೆಗಾರರು; ಪ್ರಕಾಶಕರಲ್ಲ.

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೪

ನವೆಂಬರ್ ೨೦೦೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :
ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಜನಪದ ಸಂಗತಿ ....

ಕಳೆದು ಹೋದ ಅಕ್ಟೋಬರ್ ತಿಂಗಳು ಘಟನೆಗಳಿಂದ ತುಂಬಿ ಹೋಯಿತು! ಅಕ್ಟೋಬರ್ ೨ ಗಾಂಧೀ ಜಯಂತಿ; ಅಂದೇ ಲಾಲ್‌ಬಹಾದ್ದೂರ್ ಶಾಸ್ತ್ರಿಯವರ ಜಯಂತಿ ಕೂಡ ; ಇವರ ಜಯಂತಿಗಳ ನೆನಪಿನಂಗಳದಲ್ಲಿ ದೇಶದ ತುಂಬ ನಡೆದ ಕಾರ್ಯಕ್ರಮಗಳೆಷ್ಟೋ; ಅಕ್ಟೋಬರ್ ೧೧ ಲೋಕನಾಯಕ ಜಯಪ್ರಕಾಶ ನಾರಾಯಣರ ಜಯಂತಿ; ಆ ದಿನ 'ಸಂಪೂರ್ಣ ಕ್ರಾಂತಿ' ಯ ಸಿಂಹಾವಲೋಕನ. ಇವೆಲ್ಲ ರಾಷ್ಟ್ರೀಯ ದಿನಾಚರಣೆಗಳ ಮಧ್ಯೆ ಪೆಟ್ರೋಲ್ ಮತ್ತು ಅದರ ಉಪ-ಉತ್ಪನ್ನಗಳ ಬೆಲೆ ಏರಿಕೆಯಿಂದಾಗಿ ವಾಜಪೇಯಿಯವರ ಸರ್ಕಾರಕ್ಕೆ ಮಮತಾ ಬ್ಯಾನರ್ಜಿಯವರಿಂದ ಬಲವಾದ ಗುದ್ದು; ವಾಜಪೇಯಿ ಕೆಲಕಾಲ ಸ್ತಂಭೀಭೂತ; ತಮ್ಮ ಮಂಡಿ ಆಪರೇಶನ್ ನಿಮಿತ್ತ ಮಮತಾರವರ ಬೀಸುವ ದೊಣ್ಣೆಯಿಂದ ಪಾರಾದರು; ನಾಗಪ್ಪ ಮಾರಡಗಿ ಕಾಡಿನಿಂದ ತಪ್ಪಿಸಿ ಕೊಂಡು ಓಡಿ ಬಂದರು; ರಾಜಕುಮಾರರ ಅಪಹರಣದ ಕಥೆಗೆ ಹೊಸ ತಿರುವು ಬಂದಿತು; ಸಿಡ್ನಿಯಲ್ಲಿ ೨೭ ನೇ ಒಲಿಂಪಿಕ್ಸ್ ಕ್ರೀಡಾಕೂಟ ಅದ್ದೂರಿಯಾಗಿ ಮುಗಿಯಿತು; ಅಮೇರಿಕಾ ಒಟ್ಟು ೯೭ ಮೆಡಲ್ಸ್ ಪಡೆದರೆ ಭಾರತ ಇತರ ೧೦ ದೇಶಗಳಂತೆ ಒಂದೇ ಒಂದು ಕಂಚಿನ ಪದಕ ಪಡೆಯಿತು; ರಶಿಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ ಭಾರತಕ್ಕೆ ಭೇಟಿ ಕೊಟ್ಟು ಎರಡೂ ದೇಶಗಳ ಮಧ್ಯದ ಪರಂಪರಾಗತ ಸಂಬಂಧವನ್ನು ಇನ್ನಷ್ಟು ಧೃಡಪಡಿಸಿಹೋದರು; ಮೈಸೂರಿನಲ್ಲಿ ದಸರಾ ಉತ್ಸವ ಯಾವ ವಿಶೇಷ ಪರಿಣಾಮವನ್ನೂ ಮಾಡದೆ ಪಾಸುಗಳಿಗಾಗಿ ರಾಜಕಾರಣಿ ಮತ್ತು ಅಧಿಕಾರಿಗಳ ಕಚ್ಚಾಟ ಮತ್ತು ಕೆಟ್ಟುಹೋದ ರಸ್ತೆಗಳ ಗುಂಡಿ ಮತ್ತು ಕಸದ ತೊಟ್ಟಿಗಳ ಮಧ್ಯೆ ಜಂಬೂ ಸವಾರಿ ಮುಗಿದು ಹೋಯಿತು. ಯುಗೋಸ್ಲಾವಿಯಾದಲ್ಲಿ ಮೈಲೋಸೆವಿಕ್‌ನ ದುರಾಡಳಿತ ಮುಗಿದು ಕೊಸ್ಟೂನಿಕಾನ್ ನೇತೃತ್ವದಲ್ಲಿ ಜನಪ್ರಿಯ ಪ್ರಜಾಸತ್ತಾತ್ಮಕ ಸರ್ಕಾರ ಪ್ರತಿಷ್ಠಾಪಿತಗೊಂಡುದುದು ಒಂದು ಒಳ್ಳೆಯ ಬೆಳವಣಿಗೆಯಾಯಿತು. ರಾಜಕೀಯ ಭ್ರಷ್ಟಾಚಾರದ ವಿರುದ್ಧ ನ್ಯಾಯಾಂಗವು ಸಾರಿರುವ ಸಮರದ ಫಲವಾಗಿ ಸಧ್ಯಕ್ಕೆ ಜಯಲಲಿತಾಗೆ ಮೂರು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ; ಅದೇ ರೀತಿ ಮಾಜಿ ಪ್ರಧಾನಮಂತ್ರಿ ಪಿ. ನರಸಿಂಹ ರಾವ್ ಮತ್ತು ಬೂಟಾಸಿಂಗ್ ಸಹ ಕಠಿಣ ಶಿಕ್ಷಗೆ ಒಳಗಾಗಿದ್ದಾರೆ; ಬೋಫರ್ಸ್ ತುಪಾಕಿ ಖರೀದಿ ವ್ಯವಹಾರದಲ್ಲಿ ಲಂಚ ಪಡೆದುದಕ್ಕಾಗಿ ಹಿಂದೂಜಾ ಸಹೋದ ರರು ಸಹ ಶಿಕ್ಷೆಗೆ ಒಳಪಡುವ ಸಾಧ್ಯತೆ ಇದೆ. ಹೀಗೆ ಘಟನೆಗಳ ಹಿಂದೆ ಘಟನೆ ನಡೆಯುತ್ತಾ ಸಾಗಿವೆ. ಈ ಪ್ರಮುಖ ಘಟನೆಗಳಲ್ಲಿ ಹೆಚ್ಚಿನವು ಭ್ರಷ್ಟಾಚಾರ ಮತ್ತು ಹಿಂಸೆಗೆ ಸಂಬಂಧಿಸಿದ್ದಾಗಿವೆ. ಇಂಥ ಬೆಳವಣಿಗೆಯನ್ನು ತಡೆಯುವ ಸಾಮರ್ಥ್ಯ ಜನತೆಗೆ ಇನ್ನೂ ಬರಬೇಕಿದೆ.

– ಸು. ಕೌ

ನ್ಯಾಯಾಂಗದ ಕ್ರಿಯಾಶೀಲತೆ: ಒಂದು ವಿವೇಚನೆ

-ಸುರೇಂದ್ರ ಕೌಲಗಿ

ಹಿಂದಿನ ಪ್ರಧಾನಮಂತ್ರಿ ಶ್ರೀ ಪಿ. ವಿ. ನರಸಿಂಹರಾವ್ ಮತ್ತು ಕೇಂದ್ರ ಮಂತ್ರಿ ಬೂಟಾಸಿಂಗ್ ಅವರಿಗೆ ಮೂರು ವರ್ಷದ ಕಠಿಣ ಶಿಕ್ಷೆ ಹಾಗೂ ಎರಡು ಲಕ್ಷ ರೂಪಾಯಿ ದಂಡದ ಶಿಕ್ಷೆಯನ್ನು ವಿಶೇಷ ನ್ಯಾಯಾಲಯ ವಿಧಿಸಿದೆ; ಅದೇ ರೀತಿ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜಯಲಲಿತಾ ಮತ್ತು ಅವರ ನಿಕಟವರ್ತಿ ಶಶಿಕಲಾ ಅವರಿಗೂ ಕಾರಾಗೃಹ ವಾಸದ ಶಿಕ್ಷೆಯನ್ನು ನ್ಯಾಯಾಲಯ ವಿಧಿಸಿದೆ; ಅಲ್ಲದೆ, ಡಾ। ರಾಜಕುಮಾರರ ಅಪಹರಣವಾಗಿ ಈಗ ಅವರ ಬಿಡುಗಡೆಯ ಸಂದರ್ಭದಲ್ಲಿ ಉನ್ನತ ನ್ಯಾಯಾಲಯ ಟಾಡಾ ಕೈದಿಗಳನ್ನು ಬಿಡುವ ವಿಷಯದಲ್ಲಿ ಬಹಳಷ್ಟು ಪೂರ್ವಾಪರ ವಿಚಾರದಲ್ಲಿ ತೊಡಗಿದೆಯಷ್ಟೇ ಅಲ್ಲ, ಕರ್ನಾಟಕ ಮತ್ತು ತಮಿಳುನಾಡ ಸರ್ಕಾರಗಳಿಗೆ ಛೀಮಾರಿ ಹಾಕುತ್ತಿದೆ. ಇವೆಲ್ಲವುಗಳ ಜೊತೆಗೆ ಮಾಜಿ ಪ್ರಧಾನಿ ರಾಜೀವ್ ಗಾಂಧೀ ಬಳಗಾಗಿದ್ದ ಬೋಫರ್ಸ್ ಫಿರಂಗಿ ಭ್ರಷ್ಟಾಚಾರದ ವಿವಾದ ಈಗ ನ್ಯಾಯಾಲಯದ ಮುಂದೆ ಬಂದಿದೆ ಮತ್ತು ಈ ಹಣದ ವ್ಯವಹಾರದಲ್ಲಿ ದಳ್ಳಾಳಿಗಳಾಗಿದ್ದ ಹಿಂದುಜಾ ಸಹೋದರರನ್ನು ಬಂಧಿಸುವ ಬಗ್ಗೆ ವಿಚಾರಣೆ ತೀವ್ರವಾಗಿ ನಡೆದಿದೆ. ಇವು ನ್ಯಾಯಾಂಗದ ಕ್ರಿಯಾಶೀಲತೆಯ ಇತ್ತೀಚಿಗಿನ ಕೆಲ ಮಹತ್ವದ ಉದಾಹರಣೆಗಳು.

ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಎಂಬ ಮೂರು ಸ್ವತಂತ್ರ ಆಡಳಿತ ವ್ಯವಸ್ಥೆಯನ್ನು ಮಾಡಿದ್ದೇವೆ. ಆದರೆ ಈ ಮೂರೂ ಅನೇಕ ಸಲ ತಮ್ಮ ವಿಶಿಷ್ಟ ಸ್ಥಾನಮಾನ ಮರೆತು ಒಂದು ಇನ್ನೊಂದರ ಶರಣಾಗುವ ಸಂದರ್ಭಗಳು ಇಲ್ಲದೆ ಇಲ್ಲ. ಇಂಥ ಸಂದರ್ಭಗಳಲ್ಲಿ ದೇಶದ ಒಟ್ಟಾರೆ ಹಿತ ಗೌಣವಾಗಿ ಯಾವುದೋ ಒಬ್ಬ ಪ್ರಭಾವಶಾಲಿ ವ್ಯಕ್ತಿಯ ಹಿತ ಮತ್ತು ಸ್ವಾರ್ಥ ನೆರವೇರುತ್ತದೆ; ಪ್ರಜಾಪ್ರಭುತ್ವದ ಮೂಲಭೂತ ಆಶಯಕ್ಕೆ ಧಕ್ಕೆ ಒದಗುತ್ತದೆ. ಇಂಥ ಘಟನೆಗಳೇ ಹೆಚ್ಚಾಗಿರುವಾಗ ಇತ್ತೀಚಿಗಿನ ನ್ಯಾಯಾಲಯದ ತೀರ್ಮಾನಗಳಿಂದಾಗಿ ದೇಶದಲ್ಲಿ ಹೊಸ ಗಾಳಿ, ಶುದ್ಧ ಗಾಳಿ ಬೀಸುತ್ತಿರುವ ಅನುಭವವಾಗುತ್ತಿದೆ.

ಕಾರ್ಯಾಂಗವು ನಮ್ಮ ದೇಶದಲ್ಲಿ ನ್ಯಾಯಾಂಗವನ್ನೂ ಮತ್ತು ಶಾಸಕಾಂಗವನ್ನೂ ತನ್ನ ಇಚ್ಛೆಗನುಗುಣವಾಗಿ ತಗ್ಗಿಸಿ ಬಗ್ಗಿಸಿದ ಉದಾಹರಣೆಗಳು ಹೇರಳವಾಗಿವೆ ಮತ್ತು ಈಗಲೂ ದೊರೆಯುತ್ತಿವೆ. ಆದರೆ ಪ್ರಜಾಪ್ರಭುತ್ವದ ಚೇತನಕ್ಕೇ ಕುಠಾರಪ್ರಾಯವಾಗುವಂಥ ಕ್ರಮಗಳು ಯಾವಾಗಲೂ ಅಕ್ಷಮ್ಯ. ಇಂಥದೇ ಒಂದು ಘಟನೆ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ

ನಡೆದುದು ಎಲ್ಲರ ಜ್ಞಾಪಕದಲ್ಲಿದೆ. ೧೯೭೦ ರ ದಶಕದಲ್ಲಿ ಅಂದರೆ ಸ್ವಾತಂತ್ರ್ಯ ಬಂದು ೨೩ ವರ್ಷಗಳಲ್ಲಿ ಭಾರತ ದೇಶದ ತುಂಬ ಎಲ್ಲ ಕ್ಷೇತ್ರಗಳಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ತತ್ವರಹಿತ ರಾಜಕಾರಣ ವ್ಯಾಪಿಸಿದಾಗ ಜಯ ಪ್ರಕಾಶ ನಾರಾಯಣರ ನೇತೃತ್ವದಲ್ಲಿ ಪ್ರಾರಂಭದಲ್ಲಿ ಗುಜರಾತ್ ರಾಜ್ಯದ ವಿದ್ಯಾರ್ಥಿಗಳು, ನಂತರ ಬಿಹಾರ ರಾಜ್ಯದ ಯುವಕರು, ಆಮೇಲೆ ದೇಶದಾದ್ಯಂತ ಜನತೆ ಅಹಿಂಸಕ ಕ್ರಾಂತಿ ಹೂಡಿದಾಗ ಇಂದಿರಾ ಗಾಂಧೀ ಮೊಟ್ಟ ಮೊದಲನೇ ಬಾರಿಗೆ ಸಂವಿಧಾನವನ್ನು ಮತ್ತು ಪ್ರಜಾಪ್ರಭುತ್ವದ ಮೂರು ಆಧಾರಸ್ಥಂಭಗಳಾದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳನ್ನು ಒಟ್ಟಿಗೆ ತಮ್ಮ ಕೈವಶ ಮಾಡಿಕೊಂಡರು. ನಮ್ಮ ಸಂವಿಧಾನದ ವಿಧಿ ವಿಧಾನಗಳ ಪ್ರಕಾರ ಸರ್ವಾಧಿಕಾರ ಸಾಧ್ಯವಿಲ್ಲವೆಂಬ ಅಭಿಪ್ರಾಯದಲ್ಲಿದ್ದಾಗ ಇಂದಿರಾ ಗಾಂಧಿ ಆ ಅಭಿಪ್ರಾಯವನ್ನು ಸುಳ್ಳು ಮಾಡಿ ತೋರಿಸಿದರು. ಇಡೀ ದೇಶವನ್ನೇ "ಇಂಡಿಯಾ ಅಂದರೆ ಇಂದಿರಾ" ಎಂಬ ಘೋಷಣೆಗೆ ಸಮೀಕರಣಮಾಡಿದರು. ಇಂಥ ಪ್ರಜಾಪ್ರಭುತ್ವದ ದಮನಕಾರಿ ಶಕ್ತಿಯ ವಿರುದ್ಧ ನ್ಯಾಯಾಂಗ ಆನಂತರ ಕ್ರಿಯಾಶೀಲಗೊಂಡು ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆ ಸಾಧ್ಯವಾಯಿತು.

ಏಶಿಯಾ ಖಂಡದ ಅನೇಕ ದೇಶಗಳಲ್ಲಿ ಇಂದಿಗೂ ನ್ಯಾಯಾಂಗ ತನ್ನ ಅಸ್ತಿತ್ವ ಕಳೆದುಕೊಂಡು ಯಾವುದಾದರೊಬ್ಬ ಸರ್ವಾಧಿಕಾರಿಯ ಅಧೀನದಲ್ಲಿದ್ದು ಕೆಲಸ ಮಾಡುತ್ತಿರುವುದು ಗೋಚರಿಸುತ್ತದೆ. ಅವುಗಳಲ್ಲಿ ಪ್ರಮುಖ ಉದಾಹರಣೆ ಪಕ್ಕದ ಪಾಕಿಸ್ತಾನ ಮತ್ತು ಯುರೋಪ್ ಖಂಡದಲ್ಲಿಯ ಯುಗೋಸ್ಲಾವಿಯಾ. ಪಾಕಿಸ್ತಾನದಲ್ಲಿ ಈಗ ಸರ್ವಾಧಿಕಾರಿಯಾಗಿರುವ ಮುಶರಫ್ ನ್ಯಾಯಾಂಗವನ್ನು ಪೂರ್ಣವಾಗಿ ತನ್ನ ಮುಷ್ಟಿಯೊಳಗೆ ಹಿಡಿದಿಟ್ಟಿದ್ದಾನೆ. ಅಲ್ಲಿಯ ರಾಜಕೀಯ ಸ್ವಾತಂತ್ರ್ಯ ನಿಲುಗಡೆಗೆ ಬಂದಿದೆ. ಯುಗೋಸ್ಲಾವಿಯಾದಲ್ಲಿ ಸುಮಾರು ೧೩ ವರ್ಷಗಳ ಮ್ಯೆಲೋವಿಕ್‌ನ ದಮನಕಾರಿ ಆಡಳಿತ ನಡೆಸಿದ. ಅವನ ಆಳ್ವಿಕೆಯಲ್ಲಿ ನ್ಯಾಯಾಂಗ ಕೇವಲ ನೆಪ ಮಾತ್ರಕ್ಕೆ ಇತ್ತು. ಪಕ್ಕದ ಬರ್ಮಾದಲ್ಲಿ ಇಂದಿಗೂ ಕೂಡ ನ್ಯಾಯಾಂಗದ ಕತ್ತನ್ನು ಕಟ್ಟಿಡಲಾಗಿದೆ.

ಹೀಗೆ ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಮತ್ತು ಅದರ ಬೆಳವಣಿಗೆಗೆ ಸ್ವತಂತ್ರ ನ್ಯಾಯಾಂಗವು ಬಹಳ ಅಗತ್ಯವಿರುವಾಗ ಈಗ ನಮ್ಮ ದೇಶದಲ್ಲಿ ಅದು ಕ್ರಿಯಾಶೀಲವಾಗಿ ರೂಪುಗೊಳ್ಳುತ್ತಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಇಬ್ಬರು ಪ್ರಮುಖ ಹಾಗೂ ದೊಡ್ಡ ರಾಜಕಾರಣಿಗಳಿಗೆ ಭ್ರಷ್ಟಾಚಾರದ ಕಾರಣದಿಂದಾಗಿ ಜೈಲು ಶಿಕ್ಷೆಯಾಗಿರುವುದರ ಒಳ್ಳೆಯ ಪರಿಣಾಮವಾಗುವುದೆಂದು ನಿರೀಕ್ಷಿಸಲಾಗಿದೆ ಹಾಗು ಅಪೇಕ್ಷಿಸಲಾಗಿದೆ. ಇನ್ನು ಮುಂದೆ ದೊಡ್ಡ ಹುದ್ದೆಗಳಲ್ಲಿರುವ ವ್ಯಕ್ತಿಗಳು ತಮ್ಮ ಸಾರ್ವಜನಿಕ ಜೀವನವನ್ನು ಪ್ರಾಮಾಣಿಕವಾಗಿ

ಕರ್ತವ್ಯನಿಷ್ಠೆಯಿಂದ ನಡೆಸಿಕೊಂಡು ಹೋಗುವರೆಂದು ಭಾವಿಸಲಾಗಿದೆ.

ಆದರೆ ನ್ಯಾಯಾಂಗದ ಕ್ರಿಯಾಶೀಲತೆಗೂ ಕೂಡ ತನ್ನದೇ ಆದ ನೈತಿಕ ನೆಲೆ ಮತ್ತು ನೈತಿಕ ಶಕ್ತಿ ಇರಬೇಕಾಗುತ್ತದೆ. ಕೇವಲ ಅದು ಕಾನೂನಿನ ಚೌಕಟ್ಟಿನೊಳಗೇ ಯಾವಾಗಲೂ ಕೆಲಸ ಮಾಡುವುದು ಸರಿಹೋಗಲಾರದು. ಕಾನೂನಿನ ಹಿಂದಿರುವ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಪು ಕೊಡಬೇಕಾಗುತ್ತದೆ. ಎಷ್ಟೋ ಸಲ ಈ ರೀತಿ ಆಗದೆ ಸಾಮಾಜಿಕ ಪ್ರಗತಿ ಕುಂಠಿತಗೊಳ್ಳಬಹುದು ಇಲ್ಲವೆ ಅನೇಕ ಸಮಸ್ಯೆಗಳಿಗೆ ಕಾರಣವಾಗಬಹುದು ಕೂಡ. ಇದಕ್ಕೆ ಉದಾಹರಣೆ ಸರ್ದಾರ ಸರೋವರದ ಅಣೆಕಟ್ಟಿನ ಎತ್ತರವನ್ನು ೮೦ ಮೀಟರ್‌ನಿಂದ ೧೩೫ ಮೀಟರ್‌ಗೆ ಏರಿಸುವ ತೀರ್ಪನ್ನು ಗಮನಿಸಬಹುದು. ದೊಡ್ಡ ಅಣೆಕಟ್ಟುಗಳು ಪರಿಸರದ ರಕ್ಷಣೆಯ ದೃಷ್ಟಿಯಿಂದ ಶಾಪವೆಂದು ಅಂಗೈ ಹುಣ್ಣಿನಷ್ಟೆ ಸ್ಪಷ್ಟವಾಗಿದ್ದರೂ ಅಭಿವೃದ್ಧಿಯ ತಪ್ಪು ವ್ಯಾಖ್ಯಾನದ ಅಡಿಯಲ್ಲಿ ನ್ಯಾಯಾಲಯ ದೊಡ್ಡ ಅಣೆಕಟ್ಟು ಕಟ್ಟುವುದಕ್ಕೆ ಅನುಮತಿ ಕೊಟ್ಟಿದೆ. ಈ ತೀರ್ಪಿನ ನಿಜವಾದ "ಸಮುದಾಯ ಹಿತ" ವನ್ನು ಕಾದುನೋಡಬೇಕಿದೆ. ಅನುಭವಿಸಿ ತಿಳಿಯಬೇಕಿದೆ.

ಅಲ್ಲದೆ, ಇಂದು ದೇಶದ ಎಲ್ಲ ನ್ಯಾಯಾಲಯಗಳಲ್ಲಿ ದೀರ್ಘ ಕಾಲದಿಂದ ನಿದ್ರಿಸುತ್ತಿರುವ ಕೇಸುಗಳ ಸಂಖ್ಯೆ ಕೋಟಿ ಸಂಖ್ಯೆಯನ್ನು ಮುಟ್ಟುತ್ತದೆ. ಈ ವಿಷಯದಲ್ಲಿ ನ್ಯಾಯಾಂಗದ ಕ್ರಿಯಾಶೀಲತೆ ಪ್ರಶ್ನಾರ್ಹವಾಗಿಯೇ ಉಳಿಯುತ್ತದೆ. ನರಸಿಂಹರಾವ್‌ರವರ ಕೇಸಿಗೆ ಸಂಬಂಧಿಸಿದಂತೆಯೇ ವಿಶೇಷ ನ್ಯಾಯಾಲಯದ ತೀರ್ಪು ಅನೇಕ ನ್ಯಾಯಿಕ ವಿವಾದಗಳಿಗೆ ಎಡೆಮಾಡಿಕೊಡುತ್ತದೆ. ನ್ಯಾಯಾಲಯದ ತೀರ್ಪಿನ ಪ್ರಕಾರ ಲಂಚ ಕೊಟ್ಟವರು ಮಾತ್ರ ಅಪರಾಧಿಯಾಗಿದ್ದು ಲಂಚ ಪಡೆದವರು ಅಪರಾಧಿಗಳೆನಿಸಿಲ್ಲ. ರಾಜಕೀಯ ಉದ್ದೇಶಕ್ಕಾಗಿ ಲಂಚ ಕೊಡುವುದು - ಪಡೆಯುವುದು ಎಲ್ಲ ಹಂತಗಳಲ್ಲಿ ಪರೋಕ್ಷವಾಗಿ ನಡೆದುಕೊಂಡುಬಂದಿದೆ. ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳಲು ಎದುರಾಳಿಗೆ ಮಂತ್ರಿಮಂಡದಲ್ಲಿ ಸ್ಥಾನ ಕೊಡುವುದು, ಇತರೆ ಆಮಿಷಗಳನ್ನು ತೋರಿಸುವುದು ಇತ್ಯಾದಿ ನಡೆಯುತ್ತಲೇ ಇವೆ. ಇವು ಲಂಚವೆನಿಸುವುದಿಲ್ಲ.! ಇಂಥ ವಿಷಯಗಳ ಬಗ್ಗೆ ನ್ಯಾಯಾಲಯ ಇನ್ನೂ ಸೂಕ್ಷ್ಮ ಸಂವೇದನಾಶೀಲತೆಯನ್ನು ಬೆಳೆಸಿಕೊಳ್ಳಬೇಕಾಗಿದೆ.

ನ್ಯಾಯಾಂಗದ ಕ್ರಿಯಾಶೀಲತೆಯೂ ಪಾರದರ್ಶಕವಾಗಿರಬೇಕು ಮತ್ತು ಆ ಕ್ರಿಯಾಶೀಲತೆ ಸಾಮಾನ್ಯ ಪ್ರಜೆಯ ಹೃದಯದಲ್ಲೂ ಅವನ ಸುರಕ್ಷತತೆ, ಹಕ್ಕುಗಳ ರಕ್ಷಣೆ ಮತ್ತು ಸಮಾನ ಅವಕಾಶಗಳನ್ನು ಒದಗಿಸುವ ಭರವಸೆಯ ಬಗ್ಗೆ ಖಚಿತ ನಂಬಿಕೆಯನ್ನು ಮೂಡಿಸುವಂತಾಗಬೇಕು. ಜೊತೆಗೆ ಶಿಷ್ಟರಿಗೆ ರಕ್ಷಣೆ, ದುಷ್ಟರಿಗೆ ಶಿಕ್ಷೆಯ ಪ್ರಕ್ರಿಯೆ ಕೂಡ ನಿರ್ವಂಚನೆಯಾಗಿ ನಡೆಯುವಂತಾಗಬೇಕು. ★

ಜಮನಾಲಾಲ ಬಜಾಜ್

– ವಿನೋಬಾ

(ಜಮನಾಲಾಲ್ ಬಜಾಜ್ ತಮ್ಮ ಎಲ್ಲ ಶ್ರೀಮಂತಿಕೆಯನ್ನು ಮಹಾತ್ಮಾ ಗಾಂಧೀಜಿಯವರ ಮೂಲಕ ರಾಷ್ಟ್ರಕ್ಕೆ ಸಮರ್ಪಿಸಿ "ಧರ್ಮದರ್ಶಿತ್ವ"ದ ವಿಚಾರವು ಸಾಕಾರವಾಗುವಂತೆ ಮಾಡಿದ ಮಹನಿಯರು. ಇಂದಿನ ಕೈಗಾರಿಕೋದ್ಯಮಿಗಳಿಗೆ ಮತ್ತು ಬಂಡವಾಳಶಾಹಿಗಳಿಗೆ ಅವರ ಜೀವನವು ಆದರ್ಶವಾಗಿದೆ. ಇಲ್ಲಿ ಅವರ ಜೀವನದ ಇಣುಕು ನೋಟ ಇದೆ. –ಸಂ)

ಸನ್ ೧೯೪೨ರ ಫೆಬ್ರುವರಿ ೧೧ನೇ ತಾರೀಖು ಜಮನಾಲಾಲ ತೀರಿ ಕೊಂಡರು. ಅವರು ಐದನೇ ಮಗನಾಗಿ ಬಾಪೂ ಜೊತೆ ಪೂರ್ಣವಾಗಿ ಸೇರಿ ಕೊಂಡಿದ್ದರು. ಬಾಪೂರ ಸ್ನೇಹಿತರಬಳಗ ಮತ್ತು ಅವರ ಕುಟುಂಬ ಇವುಗಳ ಮಧ್ಯ ಯಾವ ಭೇದವೂ ಇರಲಿಲ್ಲ. ದೇವದಾಸನ ಮೇಲೆ ಇದ್ದ ಪ್ರೇಮದಷ್ಟೇ ಪ್ರೇಮ ಜಮನಾಲಾಲರ ಮೇಲೂ ಇಟ್ಟಿದ್ದರು. ಹೀಗೆ ಎಲ್ಲಿ ಪ್ರೇಮ ಕ್ಷೇತ್ರ ಮತ್ತು ಕರ್ಮಕ್ಷೇತ್ರ ಒಂದಾಗಿ ಬಿಡುತ್ತದೋ ಅಲ್ಲಿ ಧರ್ಮಕ್ಷೇತ್ರ ಉದಯಿಸುತ್ತದೆ.

ಜಮನಾಲಾಲ್‌ರೊಂದಿಗೆ ಇದ್ದ ನನ್ನ ಸಂಬಂಧವನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಾಗಲಾರದು. ನಾಲ್ಕು ಕುಟುಂಬಗಳೊಂದಿಗೆ ನನ್ನ ಪರಿಚಯ ವಿದೆ. ಒಂದು ಮಹಾತ್ಮಾ ಗಾಂಧೀಯವರದು, ಎರಡನೆಯದು ಜಮನಾಲಾಲಜಿಯವರದು, ಮೂರನೆಯದು ಅಣ್ಣಾ ಸಾಹೇಬ್ ದಾಸ್ತಾನೆಯವರದು ಮತ್ತು ನಾಲ್ಕನೆಯದು ರಮಾದೇವಿ ಚೌಧರಿಯವರದು. ಈ ನಾಲ್ಕು ಕುಟುಂಬಗಳಲ್ಲದೆ ಬೇರೆ ಇನ್ನು ಯಾವುದೇ ಕುಟುಂಬದ ಜೊತೆ ನನ್ನ ಪರಿಚಯವಿಲ್ಲ.

ಜಮನಾಲಾಲಜಿಯವರ ತೀವ್ರ ಅಪೇಕ್ಷೆಯ ಮೇರೆಗೆ ಬಾಪೂ ತಮ್ಮ ಸತ್ಯಾಗ್ರಹ–ಆಶ್ರಮದ ಒಂದು ಶಾಖೆಯನ್ನು ವರ್ಧಾದಲ್ಲಿ ಪ್ರಾರಂಭಿಸಲು ನಿಶ್ಚಯಿಸಿದರು ಮತ್ತು ಅದರ ಸಂಚಾಲನಕ್ಕಾಗಿ ನಾನು ಇಲ್ಲಿಗೆ ಬರಬೇಕೆಂದು ಆದೇಶ ಕೊಟ್ಟರು. ನಾನು ನನ್ನ ಕೆಲ ಸಂಗಡಿಗರು ಮತ್ತು ವಿದ್ಯಾರ್ಥಿಗಳ ಜೊತೆ ಇಲ್ಲಿಗೆ ೮–೪–೧೯೨೧ ರಂದು ಬಂದೆ ಮತ್ತು ಆಂದಿನಿಂದ ಇಲ್ಲಿ ಆಶ್ರಮ ಪ್ರಾರಂಭವಾಯಿತು.

ಬಾಪೂ ಇಲ್ಲಿ ವರ್ಧಾಕ್ಕೆ ಬಂದು ೧೫ ವರ್ಷ ಇದ್ದರು. ಅವರು ಇಲ್ಲಿಗೆ ಬರುವಂತೆ ಮಾಡಿದ ಶ್ರೇಯಸ್ಸು ಜಮನಾಲಾಲರಿಗೇ ಸಲ್ಲಬೇಕು. ಎಲ್ಲೆಲ್ಲಿಂದ ಪವಿತ್ರತೆಯನ್ನು ವರ್ಧಾಕ್ಕೆ ತರಲು ಸಾಧ್ಯವೋ ಅಲ್ಲಲ್ಲಿಂದ ಜಮನಾಲಾಲ ಅದನ್ನು ತಂದರು. ಅವರು ಭಗೀರಥನಂತೆ ಇಲ್ಲಿಗೆ ಗಂಗೆ ತಂದರು ಮತ್ತು ವರ್ಧಾವನ್ನು ಒಂದು ಪುಣ್ಯಕ್ಷೇತ್ರವನ್ನಾಗಿ ಮಾಡಿದರು. ಇಲ್ಲಿ ಏನು ಅನೇಕ

ಸಂಸ್ಥೆಗಳು ಕಾಣುತ್ತಿವೆಯೋ ಅವೆಲ್ಲವು ಜಮುನಾಲಾಲರ ಕೃತಿಯೋ ಆಗಿದೆ. ಬಾಪೂ ವಿಚಾರ ಮಾಡಿದ್ದನ್ನು ಜಮುನಾಲಾಲರು ಜಾರಿಗೆ ತರುತ್ತಿದ್ದರು. ಹೀಗಿತ್ತು ಅವರ ಸಂಬಂಧ. ಅವರಿಬ್ಬರೂ ಜಾತಿ, ಧರ್ಮ ಮುಂತಾದ ಯಾವುದೇ ಪ್ರಕಾರದ ಭೇದ ಇಟ್ಟುಕೊಳ್ಳದೆ ಮನುಷ್ಯ ಮಾತ್ರ ಒಂದೇ ಎಂದು ಭಾವಿಸಿ ಸೇವೆ ಮಾಡಿದರು. ಬಡವರೊಂದಿಗೆ ಏಕರೂಪ ಆಗುವ ನಿರಂತರ ಪ್ರಯತ್ನ ಮಾಡಿದರು.

ನಾನು ಇಂದು ಜಮುನಾಲಾಲರ ಕೆಲವು ಪತ್ರಗಳನ್ನು ನೋಡುತ್ತಿದ್ದೆ. ಅವರು ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ, "ನಮಗೆ ಗಾಂಧೀಜಿಯವರ ಉತ್ತಮ ಮಾರ್ಗದರ್ಶನ ದೊರೆತಿದೆ. ಅವರು ಹೇಳಿದ ಮಾರ್ಗದಲ್ಲಿ ನಿಷ್ಕಾಮ ಜನಸೇವೆಯನ್ನು ಮಾಡಿದರೆ ಇದೇ ಜನ್ಮದಲ್ಲಿ ಮೋಕ್ಷ ಪಡೆಯಬಹುದು. ಈ ಜನ್ಮದಲ್ಲಿಯೇ ಮೋಕ್ಷ ದೊರೆಯದಿದ್ದಲ್ಲಿ ಚಿಂತೆಯಿಲ್ಲ. ಅನೇಕ ಜನ್ಮಗಳನ್ನು ಎತ್ತುತ್ತ ಸೇವೆ ಮಾಡುವುದರಲ್ಲಿ ಕೂಡ ಸಂತೋಷವಿದೆ. ಬುದ್ಧಿ ಶುದ್ಧವಾಗಿ ದ್ದರೆ ಸಾಕು".

ವರ್ಧಾದ ಸೇವೆಯನ್ನು ಅವರು ಬಹು ಪ್ರೇಮದಿಂದ ಮಾಡಿದ್ದಾರೆ. ಕೇವಲ ಸ್ವದೇಶಿ ಧರ್ಮಕ್ಕಾಗಿ ಅವರು ವರ್ಧಾವನ್ನು ಪ್ರೀತಿಸಿದರು. ತುಳಸೀ ರಾಮಾಯಣದಲ್ಲಿ ಭರತನ ಚರಿತ್ರೆ ಅವರಿಗೆ ಬಹಳ ಇಷ್ಟವಾಗಿತ್ತು. ಬಾಪೂಗೂ ಕೂಡ.

ಇಲ್ಲಿ ಇರುವ 'ಭರತ – ರಾಮ' ಮಂದಿರವು ಜಮುನಾಲಾಲರ ಉತ್ತಮ ಸ್ಮಾರಕವಾಗಿದೆ. ೧೯೩೮ ರ ಮಾತು. ನಾನು ಇಲ್ಲಿಗೆ ಬಂದಾಗ ಈಗ ಇಲ್ಲಿ ರುವ ಮೂರ್ತಿಗಳಾವವೂ ಮೇಲೆ ಇರಲಿಲ್ಲ. ವ್ಯವಸಾಯಕ್ಕಾಗಿ ಭೂಮಿ ಇತ್ತು. ನಾನು ಅಗಿಯಲು ಪ್ರಾರಂಭಿಸಿದಾಗ ನನ್ನ ಕೈಗೆ ಮೊದಲು ಭರತ – ರಾಮ ಮೂರ್ತಿ ಸಿಕ್ಕಿತು. ಆಶ್ಚರ್ಯದ ಮಾತೇನೆಂದರೆ ಗೀತಾ ಪ್ರವಚನದಲ್ಲಿ ವರ್ಣಿತ ವಾದ ರೀತಿಯಲ್ಲೇ ಈ ಭರತ – ರಾಮ ಮೂರ್ತಿಯೂ ಇತ್ತು. ಧುಲಿಯಾ ಜೈಲಿನಲ್ಲಿ ಗೀತೆಯ ಮೇಲೆ ನನ್ನ ಪ್ರವಚನಗಳಾಗುತ್ತಿದ್ದವು. ಅವುಗಳನ್ನು ಕೇಳುತ್ತಿದ್ದ ಕೇಳುಗರಲ್ಲಿ ಜಮುನಾಲಾಲಜಿ ಕೂಡ ಒಬ್ಬರು. ಗೀತಾ ಪ್ರವಚನದ ೧೨ನೇ ಅಧ್ಯಾಯದಲ್ಲಿ ಭರತ – ರಾಮರ ಭೇಟಿಯ ವರ್ಣನೆ ಬಂದಿದೆ. "ಒಬ್ಬ ಕಾಡಿನಲ್ಲಿ ಇರುತ್ತಿದ್ದ, ಇನ್ನೊಬ್ಬ ಅಯೋಧ್ಯೆಯಲ್ಲಿ ಇರುತ್ತಿದ್ದ – ಇಬ್ಬರೂ ಪೂರ್ಣರೂಪದಲ್ಲಿ ತಪಸ್ವಿಗಳಾಗಿದ್ದರು. ಯಾರಾದರು ಕಲಾಕರನು ಅವರ ಚಿತ್ರವನ್ನು ಬಿಡಿಸಿದಲ್ಲಿ ಅದೆಂಥ ಪಾವನ ಚಿತ್ರವಾಗುವುದು!"

'ಗೀತಾಯಿ' ಯ ಮೊದಲ ಪ್ರಕಾಶಕ ಜಮುನಾಲಾಲರೇ ಆಗಿದ್ದರು.

ನಾವಿಬ್ಬರೂ ಧೂಲಿಯಾ ಜೈಲಿನಲ್ಲಿದ್ದೆವು. ಆಗ "ಗೀತಾಯಿ"ಯ ಬೆಲೆಯನ್ನು ಎಷ್ಟು ಇಡಬೇಕು ಎಂಬ ಬಗ್ಗೆ ನಮ್ಮಿಬ್ಬರಲ್ಲಿ ಚರ್ಚೆ ನಡೆಯಿತು. ನಾನು ಕೇಳಿದೆ, "ಬೀಡಿಯ ಕಟ್ಟು ಎಷ್ಟು ದುಡ್ಡಿಗೆ ಸಿಗುತ್ತಿರಬಹುದು?" ಅವರು ಹೇಳಿದರು, "ನನಗೆ ಗೊತ್ತಿಲ್ಲ". ನಾನು ಹೇಳಿದೆ, "ವ್ಯಾಪಾರಿಯಾಗಿಯೂ ನಿಮಗೆ ಗೊತ್ತಿಲ್ಲವೆ?" ಅವರು ಉತ್ತರಿಸಿದರು, "ಆ ವ್ಯಾಪಾರದಲ್ಲಿ ನಾನೆಂದಿಗೂ ತೊಡಗಿರಲಿಲ್ಲ". ಆಮೇಲೆ ವಿಚಾರಿಸಲಾಗಿ ಒಂದು ಕಟ್ಟಿಗೆ ಒಂದು ಆಣೆಯೆಂದು ಗೊತ್ತಾಯಿತು. ಆದ್ದರಿಂದ 'ಗೀತಾಯಿ' ಯ ಮೊದಲ ಆವೃತ್ತಿಯ ಪುಸ್ತಕಕ್ಕೆ ಒಂದು ಆಣೆ ಬೆಲೆ ಇಡಲಾಯಿತು.

ಆ ದಿನಗಳಲ್ಲಿ ಜಮನಾಲಾಲಜಿ ಚರಖಾಸಂಘದ ಅಧ್ಯಕ್ಷರಾಗಿದ್ದರು. ಒಂದು ಸಲ ಯಾರೋ ಒಬ್ಬರು ಅವರ ಹಣವನ್ನು ತಿಂದುಹಾಕಿದರು, ಹೀಗೇನಾದರೂ ಆದಾಗ ಅವರು ಬಾಪೂ ಬಳಿಗೆ ಹೋಗುತ್ತಿದ್ದರು ಮತ್ತು ನನ್ನ ಬಳಿಯೂ ಬರುತ್ತಿದ್ದರು. ಒಬ್ಬರು ಏನು ಹೇಳಿದರು ಎಂಬುದನ್ನು ಇನ್ನೊಬ್ಬರಿಗೆ ಹೇಳುತ್ತಿರಲಿಲ್ಲ, ಇಬ್ಬರ ಸಲಹೆ ಒಂದೇ ಆಗಿದ್ದರೆ ಯಾವ ಪ್ರಶ್ನೆಯೇ ಇಲ್ಲ. ಆದರೆ ಹೀಗಾಗದಿದ್ದರೆ ಚರ್ಚೆ ಮಾಡುತ್ತಿದ್ದರು. ಅವರು ನನ್ನ ಬಳಿ ಬಂದರು ಮತ್ತು ಹೇಳಹತ್ತಿದರು, "ಈಗ ಏನು ಮಾಡಬೇಕು?" ನಾನು ಕೇಳಿದೆ. "ಆಸ್ತಿಯು ಜಮನಾಲಾಲಜಿಯವರದೇ ಅಥವಾ ಟ್ರಸ್ಟಿನದೆ?" ಅವರು ಹೇಳಿದರು, "ಟ್ರಸ್ಟಿನದು" ಕೋರ್ಟಿಗೆ ಹೋಗಬೇಕೆಂದು ನಾನು ಸಲಹೆ ಕೊಟ್ಟೆ. ಆಮೇಲೆ ಅವರು ಬಾಪೂ ಬಳಿ ಹೋದರು. ಬಾಪೂ ಹೇಳಿದರು, "ಇದನ್ನೇನು ಕೇಳುವುದು? ಕೋರ್ಟಿಗೆ ಹೋಗಲೇ ಬೇಕು". ಜಮನಾಲಾಲರಿಗೆ ಆಶ್ಚರ್ಯವಾಯಿತು. ಬಾಪೂ ಯಾವಾಗಲೂ "ನಾವು ದಂಡನೀತಿಯ, ಸರ್ಕಾರದ ಸಹಾಯ ತೆಗೆದುಕೊಳ್ಳಬಾರದು" ಎಂದು ಹೇಳುತ್ತಿದ್ದರು. ಆಗಂತೂ ಇಂಗ್ಲೀಷ್ ಸರ್ಕಾರವೇ ಇತ್ತು. ಜಮನಾಲಾಲರು ಬಾಪೂರ ಸಲಹೆ ಕೇಳಿದರೂ ಅವರಿಗೆ ಸಮಾಧಾನವಾಗಲಿಲ್ಲ. ಅವರು ಪುನಃ ನನ್ನ ಬಳಿ ಬಂದು ಚರ್ಚೆ ಮಾಡಲಾರಂಭಿಸಿದರು. "ಬಾಪೂರ ಈ ಸಲಹೆ ಎಷ್ಟರ ಮಟ್ಟಿಗೆ ಸರಿಯಿದೆ?" ಎಂದು ನನ್ನನ್ನು ಕೇಳಿದರು. ನಾನು ಹೇಳಿದೆ, "ಈ ರೀತಿ ಹಣ ಇಡುವುದು ಎಷ್ಟರ ಮಟ್ಟಿಗೆ ಉಚಿತ? ಯಾವಾಗ ಅದರ ಜವಾಬ್ದಾರಿಯನ್ನು ತೆಗೆದುಕೊಂಡಿದೆಯೆಂದ ಮೇಲೆ ಅದರ ಪರಿಹಾರವೂ ಅದೇ ರೀತಿ ಆಗಬೇಕು".

ಜಮನಾಲಾಲರ ಬಗ್ಗೆ ನಾನು ಮಾತನಾಡುವಾಗಲೆಲ್ಲ, ಯೋಚನೆ ಮಾಡುವಾಗಲೆಲ್ಲ ಅವರು ಯಾವಾಗಲೂ ಹೇಳುತ್ತಿದ್ದ ಎರಡು ವಚನಗಳು ನನ್ನ ನೆನಪಿಗೆ ಬರುತ್ತವೆ. ಒಂದು,

೬ನೇ ಪುಟಕ್ಕೆ

ಜಾಗತೀಕರಣ ಮತ್ತು ಸಾಂಸ್ಕೃತಿಕ ಗುಲಾಮಗಿರಿ

– ಜಿ. ಎಸ್. ಜಯದೇವ

ವೈಜ್ಞಾನಿಕವಾಗಿ ಮನುಷ್ಯನನ್ನು ಯೋಚಿಸಬಲ್ಲ ಪ್ರಾಣಿ ಎನ್ನುತ್ತಾರೆ. ಯೋಚನಾ ಶಕ್ತಿಯುಳ್ಳ ಈ ಮನುಷ್ಯಜಾತಿ ಹುಟ್ಟಿ ಸುಮಾರು ನಲವತ್ತು ಸಾವಿರ ವರ್ಷಗಳು ಕಳೆದಿವೆ. ಪ್ರಾಣಿಗಳ ಹಾಗೆ ವಾಸಿಸುತ್ತಿದ್ದ ಈ ಮನುಷ್ಯನ ಮನಸ್ಸು ನಿಧಾನವಾಗಿ ಜಾಗೃತವಾಯಿತು. ಅವನ ಕೈಬೆರಳುಗಳಂತೂ ವಿಕಾಸದ ಅದ್ಭುತ ಕೊಡುಗೆ. ಅವುಗಳ ಮುಖಾಂತರ ಪ್ರಾಣಿಪ್ರಪಂಚ ಹಿಂದೆಂದೂ ಕಂಡರಿಯದ ಕ್ಲಿಷ್ಟ ಕ್ರಿಯೆಗಳನ್ನು ಮಾಡತೊಡಗಿದ. ಶಿಲ್ಪಕಲೆ, ಚಿತ್ರಕಲೆಗಳು ಮೂಡತೊಡಗಿದವು. ಈ ಸಾಧ್ಯತೆಯ ಜೊತೆ ಜೊತೆಗೆ ಅವನ ಕಲ್ಪನಾ ಶಕ್ತಿ ಹೊಸ ಆಯಾಮಗಳಿಗೆ ವಿಕಾಸಗೊಂಡಿತು. ಈ ಕಲ್ಪನಾಶಕ್ತಿ ತಂದುಕೊಡುವ ಅದಮ್ಯ ಉತ್ಸಾಹ ತಾನೊಬ್ಬ ವಿಶ್ವಮಾನವನಾಗಬೇಕು ಎಂಬ ಹಂಬಲವನ್ನು ಹುಟ್ಟಿಸಿತು. ತನಗೆ ಸಾಧ್ಯವಾಗದ್ದು ಯಾವುದು ಎಂಬ ಭಾವನೆಯಿಂದ ಸೂರ್ಯ, ಚಂದ್ರ, ತಾರೆಗಳನ್ನು ಲೆಕ್ಕಿಸದೆ ಈ ಪುಟ್ಟ ಭೂಮಿಯ ಸೆಳೆತದಿಂದ ಚಿಮ್ಮಿ ವಿಶ್ವವ್ಯಾಪಿಯಾಗಲು ಪ್ರಯತ್ನಿಸಿದ. ಅಜ್ಞಾನ ಸೃಷ್ಟಿಸಿದ ಮಿಥ್ಯೆಗಳನ್ನೆಲ್ಲ ಕಿತ್ತೆಸೆದ. ಹೀಗೆ ವಿಜ್ಞಾನದ ನೆರವಿನಿಂದ ಅದ್ಭುತಗಳನ್ನು ಸಾಧಿಸಿದ. ಅದರ ಜೊತೆ ಜೊತೆಗೆ ಈ ವಿಶ್ವದ ವಿಸ್ತಾರದಲ್ಲಿ ತಾನೆಷ್ಟು ಚಿಕ್ಕವನು ಎಂಬ ವಾಸ್ತವವನ್ನೂ ಅರಿತುಕೊಂಡ.

ಆದರೂ ತನ್ನ ಮಿತಿಗಳನ್ನು ಒಪ್ಪುವವನಲ್ಲ ಈ ಮನುಷ್ಯ. ಹೊರಗೋಡುತ್ತಿದ್ದ ಮನಸ್ಸನ್ನು ಒಳಗೆ ತಿರುಗಿಸಿ ನೋಡಿದ. ಅಲ್ಲೂ ಅದೇ ಹಂಬಲ. "ನನ್ನ ಅಸ್ತಿತ್ವ ಕೇವಲ ದೇಹಕ್ಕೆ ಸೀಮಿತವಲ್ಲ; ನಾನೊಬ್ಬ ವಿಶ್ವಮಾನವ" ಎಂದು ಸಾರಿದ.

ವಿಸ್ತಾರಗೊಳ್ಳುವ ಈ ಹಂಬಲ ಎಲ್ಲ ಮನುಷ್ಯರ ಮನದ ಮೂಲ ತುಡಿತ. ಅಲ್ಪ ತೃಪ್ತಿ ಎಂಬುದು ಇವನಿಗೆ ಇಲ್ಲವೇ ಇಲ್ಲ. ಸದಾ ಭೂಮದ ಕಡೆಗೇ ಇವನ ದೃಷ್ಟಿ. ಈ ಭೂಮದೃಷ್ಟಿಯ ವಿಕೃತ, ಭೌತಿಕ ರೂಪವೇ ಜಾಗತೀಕರಣ. ಅಂತರಂಗದಲ್ಲಿ ಅನುಭಾವವಾಗಬೇಕಾದ ಈ ತುಡಿತ ಭೌತಿಕವಾಗಿ ಸಾರ್ಥಕತೆ ಪಡೆಯಲು ಹೊರಟಿತು. ಹೀಗೆ ಜಾಗತೀಕರಣದ ಕನಸು ಇಂದು ನೆನ್ನೆಯದಲ್ಲ. ಮನುಷ್ಯ ತನ್ನ ಕಲ್ಪನಾ ಶಕ್ತಿಯನ್ನು ಪಡೆದುಕೊಂಡಾಗಲೇ ಜಾಗತೀಕರಣದ ಮೊದಲ ಕನಸುಗಳನ್ನು ಕಾಣತೊಡಗಿದ. ಆದರೆ ಅದು ಸಾಧ್ಯವಾದದ್ದು ಇತ್ತೀಚಿನ ವೈಜ್ಞಾನಿಕ ದಿನಗಳಲ್ಲಿ ಮಾತ್ರ.

ಜಾಗತೀಕರಣದಿಂದ ಅನೇಕ ಅನುಕೂಲಗಳಿವೆ. ಸಮೂಹ ಮಾಧ್ಯಮಗಳಿಂದಾಗಿ ವಿಶ್ವದ ಒಂದು ಮೂಲೆಯ ಒಂದು ವೈಜ್ಞಾನಿಕ ಸಂಶೋಧನೆಯ ಲಾಭ ಮತ್ತು ಪ್ರಯೋಜನ ಜಗದ್‌ವ್ಯಾಪಿಯಾಗಿ ಎಲ್ಲರಿಗೂ ಲಭಿಸುತ್ತದೆ. ವಿಶ್ವದ ಬೇರೆ ಬೇರೆ ಮೂಲೆಗಳಲ್ಲಿರುವ ಜನ ನಿರ್ದಿಷ್ಟ ವಿಷಯದ ಬಗ್ಗೆ ತಮ್ಮೆಲ್ಲರ ಅನುಭವಗಳನ್ನು ಕ್ಷಣಾರ್ಧದಲ್ಲಿ ಕ್ರೋಢೀಕರಿಸಿ ತಮ್ಮ ಸಂಶೋಧನೆಯನ್ನು ಫಲಪ್ರದವಾಗಿ ಪರಸ್ಪರ ಸಹಕಾರದಿಂದ ಮುಂದುವರಿಸಬಹುದು. ಭೌತಿಕವಾಗಿ ಭೂಗೋಳದ ಅಂತರ ಕುಸಿದು ನಡೆದಾಗ ಜಗತ್ತಿನ ಮೂಲೆ ಮೂಲೆಗಳಲ್ಲಿ ನಾವು ಸಂಚರಿಸಬಹುದಾಗಿದೆ. ಜಗತ್ತಿನ ಮೂಲೆ ಮೂಲೆಗಳಲ್ಲಿ ವಾಸಿಸುವ ಜನಗಳ ಸುಖ-ದುಃಖಗಳಿಗೆ ಸ್ಪಂದಿಸುವಂತೆ ಇದು ಮಾಡುತ್ತದೆ, ಭಾವನಾತ್ಮಕವಾಗಿ ಇಡೀ ಭೂಮಿಯನ್ನು ಒಂದುಗೂಡಿಸುತ್ತದೆ.

ಸಮೂಹ ಮಾಧ್ಯಮಗಳು ಜಾಗತೀಕರಣದ ಪ್ರಬಲ ಸಾಧನೆ. ಇಂದು ನಾವು ಕಾಣುತ್ತಿರುವಷ್ಟು ಪ್ರಮಾಣದ ಜಾಗತೀಕರಣ ಸಾಧ್ಯವಾಗಿರುವುದು ಈ ಸಮೂಹ ಮಾಧ್ಯಮಗಳಿಂದಲೆ. ಆದರೆ ಬಹುತೇಕ ಸಮೂಹ ಮಾಧ್ಯಮಗಳು ಒಂದಲ್ಲ ಒಂದು ವಿಧದಲ್ಲಿ ಬಂಡವಾಳಶಾಹಿ ಆರ್ಥಿಕ ಸಂಸ್ಥೆಗಳ ಅಧೀನಕ್ಕೆ ಒಳಪಟ್ಟಿವೆ. ಈ ಬೃಹತ್ ಆರ್ಥಿಕ ಸಂಸ್ಥೆಗಳು ಆರ್ಥಿಕವಾಗಿ ಮಾತ್ರ ಅಳೆಯಬಹುದಾದ ಯಶಸ್ಸನ್ನು ಗುರಿಯಾಗಿಟ್ಟುಕೊಂಡು ಸಮೂಹ ಮಾಧ್ಯಮದ ಮುಖಾಂತರ ಮನುಷ್ಯರ ಮನಸ್ಸನ್ನು ತಮ್ಮ ಆವಶ್ಯಕತೆಗಳಿಗೆ ತಕ್ಕಂತೆ ನಿಯಂತ್ರಿಸುತ್ತದೆ. ಮಾನವೀಯ ಮೌಲ್ಯಗಳು ಈ ಸಂಸ್ಥೆಗಳ ಮೊದಲ ಆದ್ಯತೆ ಆಗಲಾರವು, ಒಂದು ವೇಳೆ ಈ ಆರ್ಥಿಕ ಸಂಸ್ಥೆಗಳು ಮಾನವೀಯ ಮೌಲ್ಯಗಳನ್ನು ಬಳಸಿಕೊಂಡಂತೆ ಕಂಡರೂ ಅದು ಕೇವಲ ತಮ್ಮ ಸರಕುಗಳ ಮಾರಾಟಕ್ಕೆ ಉಪಯುಕ್ತವಾಗುವಷ್ಟು ಮಾತ್ರ.

ಹೀಗೆ ಆರ್ಥಿಕ ಸಂಸ್ಥೆಗಳು ತಮ್ಮ ಸರಕು ಮಾರಾಟಕ್ಕೆ ಇಡೀ ಪ್ರಪಂಚದ ಸಂಸ್ಕೃತಿಯನ್ನು ಬದಲಿಸಿ ಸಾಂಸ್ಕೃತಿಕ ಗುಲಾಮಗಿರಿಗೆ ಎಲ್ಲ ಜನರನ್ನು ಒಳಪಡಿಸುತ್ತವೆ. ಅವರವರ ಸಂಸ್ಕೃತಿಗೆ ಅನುಗುಣವಾಗಿ ಆ ಸಮಾಜದ ಅವಶ್ಯಕತೆಗಳಿರುತ್ತವೆ. ಹೀಗಿರುವ ಈ ಮೂಲ ಸಂಸ್ಕೃತಿಯು ಬಂಡವಾಳಶಾಹಿಗಳ ಸರಕು ಮಾರಾಟಕ್ಕೆ ಅನುಕೂಲವಲ್ಲದಿರಬಹುದು. ಆದರೆ ಸಮೂಹ ಮಾಧ್ಯಮಗಳ ಮುಖಾಂತರ ಮಾನವ ಸಹಜ ದೌರ್ಬಲ್ಯಗಳನ್ನು ಬಂಡವಾಳ ಮಾಡಿಕೊಂಡು ಅನ್ಯ ಸಂಸ್ಕೃತಿ ಸಂಪ್ರದಾಯಗಳನ್ನು ಈ ಜನಾಂಗದ ಮೇಲೆ ಹೇರುವ ಕೆಲಸ ನಡೆದಿದೆ. ಮಾನವನ ಸಹಜ ದೌರ್ಬಲ್ಯಗಳಾದ ಕಾಮ, ಹಿಂಸೆ ಮತ್ತು ಹಣ ಪ್ರತಿಷ್ಠೆಯ ಆಸೆಗಳನ್ನು ಬಳಸಿಕೊಂಡು ಜಾಹಿರಾತುಗಳ ಮುಖಾಂತರ ಜನರನ್ನು

ಹೊಸ ಸಂಪ್ರದಾಯಕ್ಕೆ, ಹೊಸ ಜೀವನ ವಿಧಾನಕ್ಕೆ ಬದಲಿಸುವ ಕೆಲಸ ನಡೆದಿದೆ. ಮಾನವ ಸಹಜ ದೌರ್ಬಲ್ಯಗಳನ್ನು ಬಳಸಿ ತಮ್ಮ ಸರಕು ಮಾರಾಟಕ್ಕಾಗಿ ನಮ್ಮ ಗಮನ ಸೆಳೆಯುವ ತಂತ್ರವನ್ನು ಈ ಸಮೂಹ ಮಾಧ್ಯಮಗಳು ಎಷ್ಟರಮಟ್ಟಿಗೆ ಬಳಸುತ್ತವೆ ಎಂಬುದನ್ನು ನಮ್ಮ ಟಿ. ವಿ. ಜಾಹಿರಾತುಗಳನ್ನು ನೋಡಿದರೆ ಸರಳ ಮನಸ್ಸಿನ ಮುಗ್ಧ ಜನರು ಈ ಜಾಹಿರಾತುಗಳನ್ನು ನೋಡಿ ಬಹಳ ಬೇಗ ಪ್ರಭಾವಿತರಾಗುತ್ತಾರೆ. ಈ ಜಾಹಿರಾತುಗಳು ಕಾಮ ಮತ್ತು ಹಿಂಸೆಯ ಜೊತೆ ಜೊತೆಗೆ ಬರುವುದರಿಂದ ಅವು ಮನುಷ್ಯನ ತರ್ಕ ಶಕ್ತಿಯನ್ನು ಮೊಟಕುಗೊಳಿಸಿ ಮನಸ್ಸಿನ ಆಳದಲ್ಲಿ ಈ ಸರಕುಗಳ ಆಸೆಯನ್ನು ಬಿತ್ತುತ್ತವೆ. ಅವಶ್ಯಕತೆಗಿಂತ ಹೆಚ್ಚಾಗಿ ಒಣಪ್ರತಿಷ್ಠೆಗಾಗಿ ವಸ್ತುಗಳನ್ನು ಕೊಳ್ಳುವ ಒಂದು ಬಗೆಯ ಬಕಾಸುರ ಸಂಸ್ಕೃತಿಯನ್ನು ಹುಟ್ಟು ಹಾಕುತ್ತವೆ.

ನಮ್ಮದಲ್ಲದ ಹೊಸಬಗೆಯ ವಸ್ತುಗಳು ನಮ್ಮ ಪರಿಸರವನ್ನು ಪ್ರವೇಶಿಸಿದಾಗ ಅವುಗಳ ಜೊತೆಗೆ ಹೊಸಬಗೆಯ ಹಾವಭಾವಗಳೂ ನಮ್ಮ ಸಂಸ್ಕೃತಿಯನ್ನು ಪ್ರವೇಶಿಸುತ್ತವೆ. ಉದಾಹರಣೆಗೆ, ಹೊಸ ಬಗೆಯ ಉಡುಗೆ ತೊಡುಗೆಗಳು. ಇವು ಯುವ ಜನಾಂಗದ ಹಾವಭಾವಗಳ, ಯೋಚನಾ ಲಹರಿಯ ಮೇಲೆ ಬಹಳಷ್ಟು ಪ್ರಭಾವ ಬೀರುತ್ತವೆ. ಆದ್ದರಿಂದ ಒಂದು ಸಮಾಜದ ಮೌಲಿಕ ಆದ್ಯತೆಗಳು ಕೂಡ ಬದಲಾಗುತ್ತ ಬರುತ್ತವೆ. ಮೇಲ್ನೋಟಕ್ಕೆ ಹೊಸ ಬಗೆಯ ಉಡುಪುಗಳು ಆತಂಕಕಾರಿಯಾಗಿ ಕಾಣದಿರಬಹುದು. ದೇಹದ ಅಂಗಾಂಗಗಳನ್ನು ಮುಚ್ಚಲು ಉಡುಪುಗಳನ್ನು ತಯಾರಿಸುತ್ತೇವೆ ಅಷ್ಟೇ. ಆದರೆ ಅಂಗಾಂಗಳು ಮುಚ್ಚಿದ್ದರೂ ಸ್ಪಷ್ಟ ಆಕಾರಗಳಲ್ಲಿ ಗೋಚರಿಸಬೇಕೆಂಬ ಉದ್ದೇಶವಾಗಿ ಈ ನವೀನ ಉಡುಪುಗಳನ್ನು ತಯಾರಿಸುವುದರಿಂದ ಒಂದು ಬಗೆಯ ಅಶ್ಲೀಲತೆ ನಮ್ಮ ಸಂಸ್ಕೃತಿಯನ್ನು ಪ್ರವೇಶಿಸುತ್ತದೆ. ನಿಯಂತ್ರಣವಲ್ಲಿದ್ದ ಇಂದ್ರಿಯಾಸಕ್ತಿ ಕೆರಳುವಂತೆ ಮಾಡುತ್ತದೆ. ಯಾವಾಗ ಇಂದ್ರಿಯಾಸಕ್ತಿ ಕೆರಳಿ ಮನಸ್ಸು ಕಾಮದ ಕೈಗೆ ಸಿಗುತ್ತದೋ ಆಗ ಸುಪ್ತ ಪ್ರಲೋಭನೆಗಳು ಗರಿಗೆದರುತ್ತವೆ; ಸತಿ-ಪತಿಯರ ನಡುವಿನ ನಿಷ್ಠೆ ಕಡಿಮೆಯಾಗುತ್ತದೆ. ಇಂದ್ರಿಯಾಸಕ್ತಿಯ ತೃಪ್ತಿಗೆ ಅಡ್ಡ ಬರುವ ಅಡಚಣೆಗಳು ಹಿಂಸೆಗೆ ಕಾರಣವಾಗುತ್ತವೆ. ಅಡಚಣೆ ಮಾಡುವ ಹಿರಿಯರ ಬಗ್ಗೆ ಗೌರವವಿಲ್ಲದಾಗುತ್ತದೆ. ಮೌಲ್ಯವಲ್ಲ, ಬದಲಿಗೆ ಮಾನಸಿಕ ಖಾಯಿಲೆಗಳಿಗೆ ಎಡೆ ಮಾಡುವ ಅಸಂಬದ್ಧ ಕಲ್ಪನೆ ಎಂಬ ನಿರ್ಧಾರಕ್ಕೆ ಯುವಜನ ಬಂದು ನಿಲ್ಲುತ್ತಾರೆ.

ನಮ್ಮ ಪರಿಸರದಲ್ಲಿ ಲಭ್ಯವಿರುವ ವಸ್ತುಗಳಿಗೂ ನಮ್ಮ ಸಂಸ್ಕೃತಿಗೂ ಪರಸ್ಪರ ಗಾಢ ಸಂಬಂಧ ಇರುತ್ತದೆ. ವಸ್ತುಗಳು ಹೆಚ್ಚು ಸಿಕ್ಕಂತೆಲ್ಲ ಅವನ್ನು

ಬಳಸುವ ಇಚ್ಛೆಯಾಗುತ್ತದೆ. ಅವುಗಳನ್ನು ಬಳಸುತ್ತ ಬಳಸುತ್ತ ಅದೊಂದು ಅವಶ್ಯಕತೆಯಾಗಿಬಿಡುತ್ತದೆ. ಅವಶ್ಯಕತೆ ಅವಲಂಬನೆಯಾಗಿ, ಅವಲಂಬನೆ ಕ್ಷೋಭೆಗೆ ಕಾರಣವಾಗುತ್ತದೆ. ನಮ್ಮದೇ ಆದ ಸಾಂಸ್ಕೃತಿಕ ಪರಿಸರದಲ್ಲಿದ್ದ ಶಾಂತಿ ಸಮಾಧಾನ, ಅಲ್ಪತೃಪ್ತಿಗಳು ಬದಲಾದ ಸಾಂಸ್ಕೃತಿಕವಾತಾವರಣದಲ್ಲಿ ಇಲ್ಲವಾಗುವುದನ್ನು ನಾವು ಕಾಣುತ್ತೇವೆ. ಹೀಗೆ ಶಾಂತಿ, ಸಮಾಧಾನಗಳನ್ನು ಕಳೆದುಕೊಂಡ ಜನ ಅವನ್ನು ಹೊರ ಜಗತ್ತಿನ ಸರಕುಗಳಲ್ಲಿ ಮತ್ತೆ ಹುಡುಕುತ್ತಾ ಬಹುರಾಷ್ಟ್ರೀಯ ಕಂಪನಿಗಳ ಗುಲಾಮಗಿರಿಗೆ ಒಳಗಾಗುತ್ತಾರೆ. ಜಾಗತೀಕರಣದ ಅಸಾಧಾರಣ ಸಾಧನೆಯೆಂದರೆ ಅದು ಮನುಷ್ಯನ ಸರಳ ಜೀವನವನ್ನು ಸ್ಥಳಾಂತರಿಸಿ, ಅವಲಂಬನೆಗಳಿಂದ ಕ್ಲಿಷ್ಟವಾದ, ಸದಾ ಆತಂಕಗಳ, ಅನಿಶ್ಚಯತೆಗಳ ಜೀವನವನ್ನುಂಟು ಮಾಡುವ ಭಾವನಾಸಂದೇಶವನ್ನು ಸದಾ ಬಿತ್ತುತ್ತಿರುವುದು.

ಜಾಗತೀಕರಣದ ಬಹುಮುಖ ಉಪಯೋಗಕ್ಕೆ ನಾವು ಸೃಜನಶೀಲ ಶಕ್ತಿಯನ್ನೇ ದಂಡವಾಗಿ ತೆರಬೇಕಾಗಿದೆ. ಜಾಗತೀಕರಣ ಸ್ಥಳೀಯ ಸೃಜನಶೀಲತೆಯ ಸ್ಥಳವನ್ನು ಒಂದು ಬಗೆಯ ಸಾರ್ವತ್ರಿಕ ರಚನಾತ್ಮಕತೆಯಿಂದ ತುಂಬಿಬಿಡುತ್ತದೆ. ಸೃಜನಶೀಲತೆ ಸ್ಥಳೀಯವಾಗಿ ಮಾತ್ರ ಲಭ್ಯವಿರುವ, ಬದುಕಿಗೆ ಅತ್ಯಂತ ಹತ್ತಿರವಿರುವ ಅನುಭವಗಳಿಂದ ಮಾತ್ರ ಹುಟ್ಟುವಂಥಾದ್ದು. ಆದರೆ ಜಾಗತೀಕರಣ ಬದುಕಿನ ವಿಭಿನ್ನ ಅನುಭವಗಳ ಸರಾಸರಿಯನ್ನು ಮನುಷ್ಯನಿಗೆ ಕ್ಷಣಾರ್ಧದಲ್ಲಿ ಒದಗಿಸಿಬಿಡುವುದರಿಂದ ಅವನಲ್ಲಿ ಹುಟ್ಟುವ ಸೃಜನಶೀಲ ಶಕ್ತಿ ಯಾವುದೇ ಬಗೆಯ ಬೇರುಗಳಿಲ್ಲದ ಸಾರ್ವತ್ರಿಕ ಸಮನ್ವಯದ ಅಭಿವ್ಯಕ್ತಿ ಮಾತ್ರ ಆಗಬಲ್ಲದು. ಇಂತಹ ಸೃಜನಶೀಲತೆ ಮಣ್ಣಿನ ವಾಸನೆಯಿಂದ ದೂರ ನಿಂತು ಕಂಪ್ಯೂಟರ್ ಕೊಡುವ ನಿಖರತೆಯನ್ನು ಪಡೆದು ಕಲಾತ್ಮಕತೆಯನ್ನು ಕಳೆದುಕೊಳ್ಳುತ್ತದೆ.

ಸ್ಥಳೀಯ ಅನುಭವಗಳು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಂಡು ಸೃಜನಶೀಲ ನೆಲೆಗಟ್ಟಿನಲ್ಲಿ ಅಭಿವ್ಯಕ್ತಿಪಡೆದು ಹೊಸ ಅನುಭವದ ಸಾರದಿಂದ ಪುಷ್ಟಿಗೊಂಡು ವಿಭಿನ್ನ ಸಂಸ್ಕೃತಿಗಳು ಉಂಟಾಗುತ್ತವೆ. ಆದರೆ ಜಾಗತೀಕರಣದ ಲಾಭ ಪಡೆಯುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಸರಕು ಮಾರಾಟಕ್ಕಾಗಿ ಸಮೂಹ ಮಾಧ್ಯಮಗಳ ಮುಖಾಂತರ ಈ ಸಾಂಸ್ಕೃತಿಕ ವೈವಿಧ್ಯವನ್ನು ನಾಶಮಾಡುತ್ತಿರುವುದು ದುರದೃಷ್ಟಕರ. ಭಾರತದ ಸಾಂಸ್ಕೃತಿಕ ಸಾಗರದಲ್ಲಿ ಹೇಗೆ ಹೊಸ ಧರ್ಮಗಳು, ಅನ್ಯ ಸಂಪ್ರದಾಯಗಳು ಕರಗಿ ಮೂಲ ಸಂಸ್ಕೃತಿಯು ಕಡೆಗೆ ಶಾಶ್ವತವಾಗಿ ಉಳಿಯಿತೆಂಬ ವಿಷಯವನ್ನು ಸ್ವಾಮಿ ವಿವೇಕಾನಂದರು ಹೆಮ್ಮೆಯಿಂದ ಹೇಳಿದ್ದರು. ಆದರೆ ಜಾಗತೀಕರಣದ ಬೃಹತ್‌ಶಕ್ತಿಯ ವಿರುದ್ಧ

೨೨ ಪುಟ ನೋಡಿ

ವೈಚಾರಿಕ ಧಾರಾವಾಹಿ.... ...

ಮನುಷ್ಯ ಜವಾಬದಾರನಾಗುವುದು ಹೇಗೆ ?

– ದಾದಾ ಧರ್ಮಾಧಿಕಾರಿ

(ದಾದಾ ಧರ್ಮಾಧಿಕಾರಿ ಭಾರತದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಜೀವನವನ್ನು ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದವರು. ಅವರ ಶತಮಾನೋತ್ಸವದ ಸಂದರ್ಭವನ್ನು ಉಪಯೋಗಿಸಿಕೊಂಡು ಓದುಗರಿಗೆ ಅವರ ವಿಚಾರಪೂರ್ಣ ಅನುಭವದ ಮಾತುಗಳನ್ನು ಇಲ್ಲಿ ಕ್ರಮಶಃ ಕೊಡಲಾಗುತ್ತಿದೆ. ಇದು ಆರನೇಯ ಸರಣಿ .–ಸಂ)

ವ್ಯಕ್ತಿ ಸ್ವಾತಂತ್ರ್ಯ ಎಂದರೇನು? ಹೆಸರೇನೋ ಸ್ವಾತಂತ್ರ್ಯ. ಅದರ ಅರ್ಥ : ಹೊಣೆಗಾರಿಕೆ, ಜವಾಬದಾರಿ. ಮನುಷ್ಯತ್ವದ ಅರ್ಥವೂ ಅದೇ. ತಾನು ಮಾಡಿದ ಕೆಟ್ಟ ಕೆಲಸಕ್ಕೂ ತಾನೇ ಜವಾಬದಾರ, ಒಳ್ಳೆಯ ಕೆಲಸಕ್ಕೂ ತಾನೇ ಜವಾಬದಾರ. ಅಂಥವನೇ ಮನುಷ್ಯ. ಇದು ಮನುಷ್ಯನ ವೈಶಿಷ್ಟ್ಯ. ಪಶುವಿಗೂ ಮನುಷ್ಯನಿಗೂ ಏನು ಭೇದ? ವಿಜ್ಞಾನಿಗಳು ಎಷ್ಟೋ ಭೇದ ತೋರಿಸಬಹುದು. ಒಂದು ಮನುಷ್ಯನ ಹೆಬ್ಬೆರಳು ಉಳಿದ ಬೆರಳನ್ನು ತಾಕುತ್ತದೆ; ಎರಡನೆಯದು, ಭಾಷೆ. ಇಂಥ ವೈಶಿಷ್ಟ್ಯಗಳನ್ನು ಅವರು ತೋರಿಸಬಲ್ಲರು. ಆದರೆ ಅನನ್ಯವಾದ ಸಾಧಾರಣ ಲಕ್ಷಣ, ಒಂದು ವೈಶಿಷ್ಟ್ಯ ಬೇರೆ ಇದೆ – ಮನುಷ್ಯ ತನ್ನ ಕೆಲಸಕ್ಕೆ ತಾನು ಜವಾಬದಾರ. ಬೇರೆ ಯಾರೂ ಅಲ್ಲ. ಇದನ್ನೇ ಮನುಷ್ಯನ ಕರ್ಮಸ್ವಾತಂತ್ರ್ಯ ಎನ್ನುತ್ತಾರೆ.

ಕರ್ಮಸ್ವಾತಂತ್ರ್ಯ ಎಂದರೇನು? ಜೀವನ ಸ್ವಾತಂತ್ರ್ಯ. ನಮಗೆ ಬದುಕುವ ಸ್ವಾತಂತ್ರ್ಯ ಅನಿವಾರ್ಯ. ಬದುಕುವ ಸ್ವಾತಂತ್ರ್ಯ ಎಂದರೆ ಇಷ್ಟಬಂದ ಹಾಗೆ ಬದುಕುವ ಸ್ವಾತಂತ್ರ್ಯ. ವ್ಯವಹಾರದ ಸ್ವಾತಂತ್ರ್ಯ ವ್ಯವಹಾರ ಸ್ವಾತಂತ್ರ್ಯವಿಲ್ಲದಿದ್ದರೆ ಆ ಸ್ವಾತಂತ್ರ್ಯ ವಾಸ್ತವವಲ್ಲ. ಈ ಕರ್ಮಸ್ವಾತಂತ್ರ್ಯ ಮನುಷ್ಯನ ಮೂಲಭೂತ ಸ್ವಾತಂತ್ರ್ಯ. ತಾನು ಮಾಡಿದ ಕೆಲಸಕ್ಕೆ, ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ತಾನೇ ಜವಾಬದಾರ. ಅದರ ಫಲವನ್ನು ತಾನೇ ಭೋಗಿಸಬೇಕು. ಇದನ್ನು ನಮ್ಮ ಧರ್ಮಶಾಸ್ತ್ರದಲ್ಲಿ. ಅಧ್ಯಾತ್ಮಶಾಸ್ತ್ರದಲ್ಲಿ ಕರ್ಮಸಿದ್ಧಾಂತ ಎನ್ನುತ್ತಾರೆ. ಇದರಿಂದ ಪುನರ್ಜನ್ಮ ಹಾಗೂ ಬೇರೆ ಸಿದ್ಧಾಂತ ಹೊರಟಿವೆ. ಸಧ್ಯಕ್ಕೆ ಅವನ್ನು ಬಿಡೋಣ. ಹುಟ್ಟುಸಾವುಗಳ ಅನುಭವ ನಮಗೆ ಆಗುವುದಿಲ್ಲ. ಅದನ್ನು ಪ್ರಮಾಣಿಸಲು ಆಗದು. ಆದ್ದರಿಂದ ವೈಜ್ಞಾನಿಕವಲ್ಲ. ಇದರಲ್ಲೂ ಒಂದು ತರ್ಕ ಇದೆ. ಒಂದು ಮಾತು ಬಹಳ ತರ್ಕಸಮ್ಮತ ಆಗಿರಬಹುದು. ಆದರೆ ಅದು ಪ್ರತ್ಯಕ್ಷ ಪ್ರಮಾಣಕ್ಕೆ ಸಿಗದಿರಬಹುದು,

ಬೇರೆ ಪ್ರಮಾಣಕ್ಕೂ ಸಾಧ್ಯವಿಲ್ಲದಿರಬಹುದು. ಅದು ಅನುಭವ ಗಮ್ಯವಲ್ಲ. ಅದು ಸಿದ್ಧಾಂತ. ಪುನರ್ಜನ್ಮ ಒಂದು ಸಿದ್ಧಾಂತ, ಒಂದು ಉಪಪತ್ತಿ. ವೈಜ್ಞಾನಿಕ ಸತ್ಯವಲ್ಲ. ಅನುಭವಗಮ್ಯವೂ, ಪ್ರಯೋಗ ಸಾಧ್ಯವೂ ಆದುದೇ ವೈಜ್ಞಾನಿಕ ಸತ್ಯ. ಆದರೆ, ಕರ್ಮಸಿದ್ಧಾಂತ ಒಂದು ಸತ್ಯ. ಮನುಷ್ಯನಿಗೆ ಕರ್ಮದ ಜವಾಬದಾರಿ ಇಲ್ಲದಿದ್ದರೆ ಮನುಷ್ಯತ್ವವೇ ಅಸಂಭವ, ಸಮಾಜದ ಧಾರಣೆಯೇ ಅಸಂಭವ. ಇದನ್ನು ಅರಿತುಕೊಳ್ಳಬೇಕು. ನಾಗರಿಕ ಸ್ವಾತಂತ್ರ್ಯ, ವೈಯಕ್ತಿಕ ಸ್ವಾತಂತ್ರ್ಯಗಳ ಬಗ್ಗೆ ಕೆಲವು ಬಗೆಯ ಭ್ರಮೆ ಇರಬಹುದು. ಆದ್ದರಿಂದ ಮೊದಲು ಮೂಲಭೂತ ಸ್ವಾತಂತ್ರ್ಯದ ವಿಚಾರ ಮಾಡೋಣ.

ಮನುಷ್ಯನ ಮೂಲಭೂತ ಸ್ವಾತಂತ್ರ್ಯದ ಗೌರವ, ಪ್ರತಿಷ್ಠೆಗಳು ಕರ್ಮ ಸ್ವಾತಂತ್ರ್ಯದಲ್ಲಿ ಇವೆ. ನಮ್ಮ ಮನಸ್ಸಿನಂತೆ ನಾವು ಕೆಲಸಮಾಡುವ ಸ್ವಾತಂತ್ರ್ಯ ದಲ್ಲಿ ಮೂರು ಮಾತು ಇವೆ. ಕರ್ಮಂ, ಅಕರ್ಮಂ, ಅನ್ಯಥಾ ಕರ್ಮಂ – ಈ ಮೂರೇ ಕರ್ಮಸ್ವಾತಂತ್ರ್ಯ. ಮಾಡುವ ಸ್ವಾತಂತ್ರ್ಯ, ಮಾಡದಿರುವ ಸ್ವಾತಂತ್ರ್ಯ, ಬೇರೊಂದು ರೀತಿಯಲ್ಲಿ ಮಾಡುವ ಸ್ವಾತಂತ್ರ್ಯ. ನಾನು ಬೆಂಗಳೂರಿಗೆ ಹೋಗಬೇಕು ಎನ್ನುತ್ತೇನೆ. ನಿಮ್ಮ ಇಷ್ಟ ಎನ್ನುತ್ತೀರಿ ನೀವು. ಇಷ್ಟ ಎಂದರೆ? ಬೆಂಗಳೂರಿಗೆ ಹೋಗುವುದು. ನಿಮಗೂ ಇಷ್ಟವೆ ಬನ್ನಿ, ಹೋಗೋಣ ಎಂದು ಎಳೆದುಕೊಂಡು ಹೋದರೆ – ನಾನು 'ಇಲ್ಲ, ಈಗ ಬರುವುದಿಲ್ಲ ಎಂದ' ಎನ್ನಿ. 'ಎಲೆ, ಈಗ ಬರುತ್ತೇನೆ ಎಂದೆ. ಈಗಾಗಲೇ ಇಲ್ಲ ಎನ್ನುತ್ತೀಯಾ: ನೀನು ಬರಲೇಬೇಕು' ಎಂದರೆ? ಬೆಂಗಳೂರಿಗೆ ಹೋಗಲು ನಾನು ಸ್ವತಂತ್ರ ಎಂದರೆ ಏನು? ಹೋಗುವುದಕ್ಕೂ ಸ್ವತಂತ್ರ, ಬಿಡುವುದಕ್ಕೂ ಸ್ವತಂತ್ರ ಅಲ್ಲವೆ? ಈ ಮೆನನ್‌ಗೆ ಹೇಳುತ್ತೇನೆ : 'ನಿಮ್ಮ ವ್ಯಾನಿನಲ್ಲಿ ಬೆಂಗಳೂರಿಗೆ ಬರುತ್ತೇನೆ. ಯಾರಾದಾದರೂ ಮೋಟಾರು ಬಂದರೆ ಅದರಲ್ಲಿ ಬರುತ್ತೇನೆ. ಇಲ್ಲದಿದ್ದರೆ ಬಸ್ಸಿನಲ್ಲಿ ಬರುತ್ತೇನೆ. ಅನ್ಯಥಾ ಕರ್ಮಂ ಅಥವಾ ಬೆಂಗಳೂರಿಗೆ ಹೋಗುವುದೇ ಇಲ್ಲ. ಮಾಗಡಿಗೆ ಹೋಗುತ್ತೇನೆ. ಬೇರೆ ತೆರದಲ್ಲಿ ಕೆಲಸಮಾಡಲೂ ಸ್ವಾತಂತ್ರ್ಯವಿರಬೇಕು. ನಾನು ಮಾಡುವ ಕೆಲಸವನ್ನು, ಅದರ ರೂಪವನ್ನು ರೀತಿಯನ್ನು ಬದಲಿಸುವ ಅಧಿಕಾರ ಇದೆ. ಇದೇ ವ್ಯಕ್ತಿಸ್ವಾತಂತ್ರ್ಯ. ಇಲ್ಲದಿದ್ದರೆ ಮನುಷ್ಯ ತನ್ನ ಕೆಲಸಕ್ಕೆ ಜವಾಬದಾರ ನಾಗಲಾರ. ಕೆಲಸ ಮಾಡಲು ಸ್ವಾತಂತ್ರ್ಯವಿದ್ದರೆ ತಾನೆ ಫಲಕ್ಕೆ ಜವಾಬದಾರಿ? ಸೆರೆಯಾಳು, ತಾನು ಮಾಡಿದ ಕೆಲಸಕ್ಕೆ ಹೊಣೆಗಾರನಲ್ಲ. ಅದಕ್ಕೆ ಹೊಣೆ ಗಾರ ಜೈಲರ್. ಅವನು ಸೆರೆಯಾಳು ಆದದ್ದೇಕೆ? ತನ್ನ ಕೆಲಸಕ್ಕೆ ಹೊಣೆ ಗಾರನಾಗಲಿಲ್ಲ ಎಂದೇ ಅಲ್ಲವೇ? ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ :

ಹೆಂಗಸು. ಹೇಗಸು ತನ್ನ ಕೆಲಸಕ್ಕೆ ಹೊಣೆಯಲ್ಲ. ಯಾವ ಧಾರ್ಮಿಕ ವಿಧಿಯಲ್ಲಾದರೂ ಹೆಂಗಸು ಗಂಡನಿಗೆ ನೆರವಾಗುತ್ತಾಳೆ. ಕರ್ತೃ ಆಗಲಾರಳು, ಯಜಮಾನ ಆಗಲಾರಳು. ನೀವು ಯಜಮಾನರು. ನಿಮ್ಮ ಹೆಂಡತಿ ಸಹಾಯಕಳು. ಇದರ ಪರಿಣಾಮ? ನೀವು ಮಾಡಿದ ಪುಣ್ಯಕಾರ್ಯದ ಫಲ ದಲ್ಲಿ ಆಕೆಗೆ ಪಾಲು. ಹೀಗೇಕೆ? ಆಕೆಯ ಸಂರಕ್ಷಣೆಯ ಹೊಣೆ ನಿಮ್ಮದು. ಈ ಜವಾಬದಾರಿ ನಿಮ್ಮದು. ಆದರೆ, ಹೆಂಗಸಿಗೆ ಸ್ವಾತಂತ್ರ್ಯವಿಲ್ಲ. ನಿಮ್ಮ ಹಸು ನನ್ನ ಹೊಲದಲ್ಲಿ ಬಂದು ಮೇಯುತ್ತದೆ ಯಾರಿಗೆ ಶಿಕ್ಷೆ? ಹಸುವಿಗೋ, ನಿಮಗೋ? ಈ ಸೂಕ್ಷ್ಮ ಅಂಶ ತಿಳಿಯುವುದಿಲ್ಲ. ಹಸುವನ್ನು ದೊಡ್ಡಿಗೆ ಕೊಡುತ್ತೇನೆ. ಆದರೆ ಆ ದಂಡ ಒಡೆಯನಿಗೇ ಏಕೆ? ಹಸು ಜವಾಬದಾರ ಅಲ್ಲ. ನೀವು ಅದನ್ನು ಕಾಪಾಡಿದವರು. ಹೆಂಗಸೂ ಅಷ್ಟೇ.

ಇದು ಹಿಂದಿನ ವಿಚಾರ. ಹೆಂಗಸಿಗೆ ಇಂದೂ ನಿಜವಾಗಿ ಜವಾಬದಾರಿ ಇಲ್ಲ. ಸಂಸ್ಕೃತಿಯ ಸಂಚಾಲನೆ ಮಾಡುವವರದೇ ಈಗಲೂ ಜವಾಬದಾರಿ. ನಾಗರಿಕತೆ ನಿಜವಾಗಿ ಬೇರೂರಿಲ್ಲವಾದರೂ ಈಗ ಕಾಗದದ ಮೇಲೆ ಹೆಂಗಸಿನ ಜವಾಬದಾರಿಯನ್ನು ಒಪ್ಪಿದ್ದೇವೆ. ಹಿಂದೆ ಅಷ್ಟೂ ಇರಲಿಲ್ಲ. ಇದರ ಅರ್ಥ ಇಷ್ಟೆ : ಎಷ್ಟು ಜವಾಬದಾರಿಯೋ ಅಷ್ಟು ಸ್ವಾತಂತ್ರ್ಯ. ಜವಾಬದಾರಿ ಇಲ್ಲದಿದ್ದರೆ ಸ್ವಾತಂತ್ರ್ಯವೇ ಇಲ್ಲ. ಇಡೀ ಸಮಾಜವೇ ಈ ಸಿದ್ಧಾಂತದ ಪ್ರಕಾರ ನಡೆದಿದೆ. ಕಮ್ಯುನಿಸ್ಟ್ ಸಮಾಜವೂ ಕೂಡ ಹಾಗೆಯೇ. ಟ್ರಾಟ್‌ಸ್ಕಿ, ಬೆರಿಯಾ, ಮಾಲಕೋವ್, ಬುಲ್ಗಾನಿನ್ ಎಲ್ಲರನ್ನೂ ಏಕೆ ಮೂಲೆಗೆ ಕೂಡಿಸಿದರು? ತಾವು ಮಾಡಿದ ಕೆಲಸಕ್ಕೆ ಅವರು ಜವಾಬ ದಾರರಾಗಿರಲಿಲ್ಲ. ೧೯೧೭ ರಿಂದ ೧೯೬೦ರ ವರೆಗೆ ಎಲ್ಲ ಕೆಲಸಕ್ಕೂ ಸರಕಾರವೇ ಹೊಣೆ. ರಾಮರಾಜ್ಯದಲ್ಲೂ ಸ್ವಲ್ಪಮಟ್ಟಿಗೆ ಹೀಗೇ ಇತ್ತು. ಮುಪ್ಪಿನ ತಂದೆಯ ಹರೆಯದ ಮಗ ಸತ್ತರೆ ರಾಮ ಅದಕ್ಕೆ ಹೊಣೆ. ಇದು ರಾಜ್ಯಸತ್ತಾವಾದ. ರಾಜ್ಯಸತ್ತಾವಾದದಲ್ಲಿ ಜನರಿಗೆ ವ್ಯಕ್ತಿಸ್ವಾತಂತ್ರ್ಯವಿಲ್ಲ. ಜವಾಬದಾರಿಯೂ ಇಲ್ಲ. ನಾನು ಸೋಮಾರಿ. ನನಗೆ ಹಸಿವು. ಹಸಿದವರನ್ನೆಲ್ಲ ಗುಂಪುಕಟ್ಟಿ ಮೆರವಣಿಗೆ ಮಾಡಿಸುತ್ತೇನೆ. ಮುಖ್ಯಮಂತ್ರಿಯ ಬಳಿಗೆ ಹೋಗಿ ಹಸಿವು, ಹಸಿವು ಎಂದು ಚೀರುತ್ತೇನೆ. ನಾನು ಸೋಮಾರಿಯಾದುದರ ಜವಾಬದಾರಿಯೂ ನನ್ನದಲ್ಲ, ನಾನು ಹಸಿದಿರು ವುದರ ಜವಾಬದಾರಿಯೂ ನನಗಿಲ್ಲ. ಅದಕ್ಕೂ ನೀನೇ, ಇದಕ್ಕೂ ನೀನೇ ಜವಾಬದಾರ. ಹೀಗೆ ತನ್ನ ಜವಾಬದಾರಿಯನ್ನು ಮನುಷ್ಯ ಸಂಸ್ಥೆಗಳಿಗೆ ಹೊರಿಸಿದರೆ ಅವನ ಸ್ವಾತಂತ್ರ್ಯ ಕ್ಷೀಣವಾಗುತ್ತದೆ.

ನಮ್ಮ ದೇಶದ ಪುರಾತನ ವಿಚಾರ ಬಹಳ ಸಿದ್ಧವಿಚಾರ. ಮನುಷ್ಯನ ಕರ್ಮಕ್ಕೆ ಈಶ್ವರನು ಜವಾಬದಾರನಲ್ಲ. ಶುದ್ಧ ತತ್ವಜ್ಞಾನ ಇದು. ಈಶ್ವರ ನಿಮ್ಮನ್ನು ಅನುಗ್ರಹಿಸಬಹುದು, ಕ್ಷಮಿಸಬಹುದು : ಅದು ಈಶ್ವರನ ಆಧಿಕ್ಯ. ಆದರೆ ನನ್ನ ಕರ್ಮದ ಜವಾಬದಾರಿ ಈಶ್ವರನದಲ್ಲ. ನನ್ನ ಕರ್ಮಕ್ಕೆ ನಾನೇ ಜವಾಬದಾರ. ಯಾವ ಸಂಸ್ಥೆ, ರಾಜ್ಯವೂ ಅಲ್ಲ. ಭಗವಂತನೂ ಅಲ್ಲ. ಇದು ಮೂಲಭೂತ ಸಿದ್ಧಾಂತ. ಇದರಲ್ಲೇ ನನ್ನ ಮನುಷ್ಯತ್ವ, ಸ್ವಾತಂತ್ರ್ಯ, ಪ್ರತಿಷ್ಠೆ, ನನ್ನ ಮಾನ, ಎಲ್ಲವೂ ಇದೆ. ಇದೇ ನಮ್ಮ ಸಮಾಜ ರಚನೆಯ ಆಧಾರ. ಮನುಷ್ಯನ ಸಾಮಾಜಿಕತೆಯ ತಳಹದಿ. ಆದ್ದರಿಂದ ನಾವು ವ್ಯಕ್ತಿ ಸ್ವಾತಂತ್ರ್ಯ ಎಂದಾಗ ಏನು ಅರ್ಥ? ಸ್ವಚ್ಛಂದ ವ್ಯವಹಾರದ ಅಧಿಕಾರವಲ್ಲ. ಬೀದಿಯಲ್ಲಿ ಎಷ್ಟೋ ಮೋಟಾರು ಓಡಾಡುತ್ತವೆ. ಅವೆಲ್ಲವೂ ಸ್ವಚ್ಛಂದ ವ್ಯವಹಾರ ಮಾಡಿದರೆ ಏನು ಗತಿ? ಒಂದು ಎಡಗಡೆ, ಒಂದು ಬಲಗಡೆ. ಎಲ್ಲಾ ಮೋಟಾರು ಢಿಕ್ಕಿ ಹೊಡೆದಾವು. ಒಂದೂ ಮುಂದೆ ಸಾಗದು. ಅರಾಜಕತೆ ಆದೀತು. ಇದರಲ್ಲಿ ಜವಾಬದಾರಿ ಬರುತ್ತದೆಯೆ? ಸಮಾಜದ ಸಂಘಟನೆ ಮಾಡುವಾಗ ವ್ಯಕ್ತಿಸ್ವಾತಂತ್ರ್ಯಕ್ಕೆ ಬಹಳ ಹೆಚ್ಚು ಅವಕಾಶ ಕೊಡಬೇಕು. ವ್ಯಕ್ತಿಯ ಜವಾಬದಾರಿಗೆ ಅಧಿಕಾಧಿಕ ಅವಕಾಶವಿರಬೇಕು, ಇಲ್ಲಿ ಬಂತು ಸಮಾಜ ರಚನೆಯ ಎರಡನೆಯ ಸಿದ್ಧಾಂತ. ಕ್ರಾಂತಿಕಾರಿ ಜನ ಎಲ್ಲರೂ – ಸಮಾಜವಾದಿ, ಸಾಮ್ಯವಾದಿ, ಸರ್ವೋದಯವಾದಿ – ಏನು ಹೇಳುತ್ತೀರಿ? ಮನುಷ್ಯನ ಕರ್ಮದ ಪ್ರೇರಣೆ ಭಯದಿಂದ ಅಥವಾ ಲೋಭದಿಂದ ಬರಬಾರದು. ಮನುಷ್ಯನ ಕೆಲಸಕ್ಕೆ ಒಂದು ಪ್ರೇರಣೆ ಇರುತ್ತದೆ. ಅದು ಭಯವೂ ಆಗ ಬಾರದು, ದುರಾಶೆಯೂ ಆಗಬಾರದು. ಏಕೆ? ಹಾಗೆ ಮಾಡಿದರೆ ನಮ್ಮ ವ್ಯಕ್ತಿತ್ವ ನಾಶವಾಗುತ್ತದೆ, ಮನುಷ್ಯತ್ವ ಹಾನಿಯಾಗುತ್ತದೆ. ಆದ್ದರಿಂದ ಮನುಷ್ಯನಿಗೆ ಭಯ – ಲೋಭ ಇವುಗಳಿಗೆ ಅವಕಾಶವೇ ಇಲ್ಲದಂಥ ಸಮಾಜವನ್ನು ರಚಿಸು ಎನ್ನುತ್ತಾನೆ ಕ್ರಾಂತಿಕಾರಿ. ಇವೆರಡಕ್ಕೂ ಎಲ್ಲಿ ಅವಕಾಶ ಅತ್ಯಲ್ಪವೋ ಆ ಸಮಾಜ ಆದರ್ಶ ಸಮಾಜ. ಇದು ಒಂದು ಅಚ್ಚು ಅಲ್ಲ. ನಾವು ಹೇಳುವುದು ಇಷ್ಟು: ಮನುಷ್ಯನಿಗೆ ಜವಾಬದಾರಿಯ ಅವಕಾಶ ಅಧಿಕಾಧಿಕ ಇರಲಿ, ಭಯಕ್ಕೆ, ಲೋಭಕ್ಕೆ ಅತ್ಯಲ್ಪ ಇರಲಿ. ಇಂಥ ಸಮಾಜವನ್ನು ಕಟ್ಟಿ. ಸಮಾಜದಲ್ಲಿ ಭಯ, ಲೋಭಗಳಿಗೆ ಅವಕಾಶ ಇಲ್ಲದಿದ್ದರೆ ಮನುಷ್ಯ ಜವಾಬದಾರನಾಗುತ್ತಾನೆ.

ಭಯಕ್ಕೆ ಪ್ರೇರಣೆ ಸೈನಿಕ ಶಕ್ತಿ. ಲೋಭಕ್ಕೆ ಪ್ರೇರಣೆ ಲಾಭದೃಷ್ಟಿ ಇವೆರಡು ಪ್ರೇರಣೆಗಳಿಂದ ಬಿಡುಗಡೆ ಯಾದಾಗಲೇ ಮುಕ್ತ ಸಮಾಜ. ಶಾಸನಮುಕ್ತ ಸಮಾಜ ಯಾವುದು? ಭಯಮುಕ್ತ ಸಮಾಜ. ಶೋಷಣಮುಕ್ತ

ಸಮಾಜ ಯಾವುದು? ಲೋಭ ಮುಕ್ತ ಸಮಾಜ. ಭಯದ ಪ್ರೇರಣೆ, ಲೋಭದ ಪ್ರೇರಣೆ ಇಲ್ಲದ ಸಮಾಜವನ್ನು ಗುರುತಿಸುವುದು ಹೇಗೆ? ಮೂರು ಕುರುಹು ಇವೆ:- ನ್ಯಾಯಾಲಯ, ಪೋಲೀಸು, ಜೈಲು. ಜವಾಬದಾರಿ ಇದ್ದಷ್ಟು ಸ್ವಾತಂತ್ರ್ಯ ಎಂದೆವಲ್ಲವೆ. ಮನುಷ್ಯ ಒಳ್ಳೆಯ ಕೆಲಸ ಮಾಡಲಿ, ಕೆಟ್ಟದನ್ನು ಮಾಡದೆ ಇರಲಿ ಎಂದು ನಿಮ್ಮ ಬಯಕೆ. ಒಳ್ಳೆಯದನ್ನು ಮಾಡಲಿ ಎಂದು ಆಸೆ ತೋರಿಸುತ್ತೀರಿ. ಕೆಟ್ಟದನ್ನು ಮಾಡದಿರಲಿ ಎಂದು ಭಯ ತೋರಿಸುತ್ತೀರಿ. ಲೋಭ - ದಂಡ ಈ ಎರಡು ಪ್ರೇರಣೆ ಬಂದವು ಸಮಾಜದಲ್ಲಿ. ಬಹುಮಾನ ಇಲ್ಲವೆ ಶಿಕ್ಷೆ, ಪ್ರಶಂಸೆ ಇಲ್ಲವೆ ನಿಂದೆ. ಈ ಭಯ - ಲೋಭಗಳ ಪ್ರೇರಣೆ ಸತ್ಯನಿಷ್ಠೆಯ ಪ್ರೇರಣೆಯಲ್ಲ, ಪ್ರಾಮಾಣಿಕತೆಯ ಪ್ರೇರಣೆಯಲ್ಲ. ★

(ಮುಂದುವರಿದುದು)

ಶಿಕ್ಷಣ ವಿಚಾರಧಾರೆ...........

ಸಾಮಾಜಿಕ ಶಿಕ್ಷಣದ ಮೂಲ ಪ್ರಶ್ನೆಯಾವುದು?

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇರಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಗೆ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೮ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ಐದನೇಯ ಕಂತು ಸಂ.)

"ಸಾಮಾಜಿಕ ಶಿಕ್ಷಣದ ಮೂಲ ಪ್ರಶ್ನೆ" - ಎಂಬ ತನ್ನ ಗ್ರಂಥದಲ್ಲಿ ಕಮ್ಯೂನಿಸ್ಟ ಪಕ್ಷದ ನಿಲುವನ್ನು ಹೀಗೆ ಪೂಲ್ಗಿನ್ ತಿಳಿಸಿದಾನೆ : ಕೆಲಸಗಾರರ ಕುಟುಂಬದ ಪರಿಚಯುವನ್ನು ಮಕ್ಕಳಿಗೆ ಮಾಡಿಕೊಟ್ಟು ದುಡಿಯುವ ಸಾಮಾಜಿಕ ರೂಢಿಗಳನ್ನು ಕಲಿಯುವಂತೆ, ಕೆಲಸದ ಶಿಸ್ತನ್ನು ಅವರು ಅಭ್ಯಾಸ ಮಾಡಿಕೊಳ್ಳುವಂತೆ ಮಾಡಲು ನಮಗೆ ಶರೀರ ಶ್ರಮವೇ ಸಾಧನ.

ಪಿಂಕ್ ವಿಚ್ ಸೋವಿಯೆತ್ ಶಿಕ್ಷಣದ ಅಧಿಕೃತ ವರದಿಗಾರ. ಹಳೆ-ಹೊಸ ಶಿಕ್ಷಣ ಪದ್ಧತಿಗಳನ್ನು ಅವನು ಹೋಲಿಸಿದಾನೆ. "ಆಗ ಸ್ವತಂತ್ರ, ನಿರ್ಮಾಪಕರು ಬೇಕಾಗಿರಲಿಲ್ಲ. ಆಳುಗಳು, ಗುಮಾಸ್ತರು, ಗುಲಾಮರು ಬೇಕಾಗಿತ್ತು. ಸೋವಿಯೆತ್ ಪ್ರಜಾರಾಜ್ಯದಲ್ಲಿ ತದ್ವಿರುದ್ಧ. ದೇಶದ ಆರ್ಥಿಕ ಸಾಂಸ್ಕೃತಿಕ ರಚನೆಯು ಕೆಲಸದಲ್ಲಿ ವಿಶಾಲ ಜನಸ್ತೋಮವನ್ನು ತೊಡಗಿಸುವ ಪ್ರಶ್ನೆ ಸೋವಿಯೆತ್ ರಾಜ್ಯದಲ್ಲಿ ಸಾವು-ಬದುಕಿನ ಪ್ರಶ್ನೆ. ಆದುದರಿಂದ ಮಗು ಶಾಲೆ ಬಿಟ್ಟು ಹೋಗುವ ಮುನ್ನ "ಕೆಲಸಗಾರರಿಗಾಗಿ ರಾಜ್ಯ ಕಟ್ಟುವುದು ಹೇಗೆ?" ಎಂಬುದರ ತತ್ವ–ಅಭ್ಯಾಸ ಎರಡನ್ನೂ ಸ್ಪಷ್ಟವಾಗಿ ಅರಿಯಬೇಕು.... ಈ ಕಾರಣದಿಂದ ಸಮಗ್ರ ಶಿಕ್ಷಣ ಶಾಲೆಯಲ್ಲಿ ಶ್ರಮವೇ ಶಿಕ್ಷಣದ ಮಧ್ಯಬಿಂದುವಾಗುತ್ತದೆ. ಶಾಲೆಯ ಕಾರ್ಯಕ್ರಮದ ಎಲ್ಲಾ ಹಂತಗಳಲ್ಲೂ ಈ ಮೂಲ ಸಿದ್ಧಾಂತ ಪ್ರವೇಶಿಸುತ್ತದೆ. ಒಬ್ಬ ವಿಶೇಷಜ್ಞನ ದೃಷ್ಟಿಯಿಂದ ಶ್ರಮವನ್ನು ನಾವು ನೋಡುವುದಿಲ್ಲ! ಹೊಸ ಬಾಳನ್ನು ನಿರ್ಮಿಸುವವನ ದೃಷ್ಟಿಯಿಂದ ಯಾವ ವೃತ್ತಿಯಲ್ಲೇ ತೊಡಗಿರಲಿ ಅವನಿಗೆ ಬೇರೆ ಬೇರೆ ಬಗೆಯ ದುಡಿತದ ಪರಸ್ಪರ ಸಂಬಂಧ, ಅನುಬಂಧಗಳು ಸ್ಪಷ್ಟವಾಗಿ ತಿಳಿದಿರಬೇಕು. ಈ ತಿಳಿವನ್ನೇ ಶಿಕ್ಷಣ ಎನ್ನುತ್ತೇವೆ. ಶಾಲೆಯ ಕಾರ್ಯಕಲಾಪ ವಾಸ್ತವತೆಗೆ ನಿಕಟವಾಗಿ ಹೊಂದಿಕೊಂಡಿರಬೇಕು. ಉತ್ಪಾದಕ ಶ್ರಮಕ್ಕೆ ಪ್ರಧಾನವಾದ ಸ್ಥಾನವನ್ನು ಕೊಡಬೇಕು. ಇನ್ನೂ

ಮುಂಬರಿದು, ಶಾಲೆಯಲ್ಲಿ ಶ್ರಮಕ್ಕೆ ಇರುವ ಸಾಮಾಜಿಕ-ರಾಜಕೀಯ ಪ್ರಭಾವ ವನ್ನು ಈ ಸಂದರ್ಭದಲ್ಲಿ ಓದುಗರಿಗೆ ನೆನಪು ಕೊಡಬೇಕು." ಶ್ರಮ ಎಂದರೆ ನಮಗೆ ಬರೀ ದುಡಿತದ ಕ್ರಿಯೆಯಲ್ಲ, ಸ್ವಾವಲಂಬನೆಯಲ್ಲ, ಶಾಲಾ ಕಾರ್ಯವೂ ಅಲ್ಲ: ಅದು ಇಡೀ ಶಾಲೆಯ ಅಚ್ಚು, ತಿರುಗಣೆ."

ಗಾಂಧೀಜಿಯ ವಿಚಾರ ಸರಣಿಗೆ ಸಮೀಪವಾದುದು ಸೋವಿಯೆತ್ ಶಿಕ್ಷಣ ಪದ್ಧತಿ. ಬಹಳ ಅಚ್ಚರಿಯಾಗೇ ಕಂಡರೂ ಈ ಮಾತು ನಿಜ. ಸಮಾಜ ವಾದಿಗಳ ಮತ್ತು ಸಾಮ್ಯವಾದಿಗಳ ಸಿದ್ಧಾಂತದಲ್ಲಿ ಗಾಂಧೀಜಿಗೆ ಎಳ್ಳಷ್ಟೂ ನಂಬಿಕೆ ಯಿಲ್ಲ; ಆದರೂ ಆ ಸಿದ್ಧಾಂತಕ್ಕೆ ಗಾಂಧೀಜಿ ಬಹಳ ಹತ್ತಿರ ಹೋಗಿದಾರೆ. ಉದಾಹರಣೆಗೆ – ಕೈಗಾರಿಕೆಯಲ್ಲಿ ಒಂದು ಕನಿಷ್ಠ ಪ್ರಮಾಣದ ದಿನಗೂಲಿಯನ್ನು ಗೊತ್ತುಮಾಡಿ ಕೊಡಲೇಬೇಕೆಂದು ಹಟಹಿಡಿದರು. ಗಾಂಧೀಜಿ ಬರೀ ತತ್ವ ಹೇಳಲಿಲ್ಲ. ಎಂದಾದರೂ ಮಾಡಿ ಎನ್ನಲಿಲ್ಲ. ತಮ್ಮ ಕೈಯೊಳಗಿನ ಎಲ್ಲಾ ಉತ್ಪಾದಕ ಕಾರ್ಯಗಳಲ್ಲೂ ಆ ನಿಯಮವನ್ನು ರೂಢಿಗೆ ತಂದೇಬಿಟ್ಟರು. ಹೀಗೆ ಗಾಂಧೀಜಿ ಪ್ರತ್ಯಕ್ಷ ಆಚರಣನಿಷ್ಠ ಸಮಾಜವಾದಿ. ಈ ಕನಿಷ್ಠ ದಿನಗೂಲಿಯ ವಿಚಾರದಲ್ಲೂ ತಪ್ಪು ಹಿಡಿಯುತ್ತಾರೆ ನಮ್ಮ ಸಮಾಜವಾದಿ ಗೆಳೆಯರು. ತತ್ವ ತಪ್ಪು ಎನ್ನಲು ಬಾರದಿದ್ದರೆ ರೊಕ್ಕ ಕಡಮೆ ಎಂದು ಆಕ್ಷೇಪಿಸುತ್ತಾರೆ.

ಅವರು ನಿಜವಾಗಿ ವಾಸ್ತವ ದೃಷ್ಟಿಯವರೂ ವೈಜ್ಞಾನಿಕ ಬುದ್ಧಿ ಯವರೂ ಆಗಿದ್ದರೆ ಖಂಡಿತ ತಿಳಿಯುತ್ತಿತ್ತು. ಹಿಂದೂಸ್ತಾನದ ಹಳ್ಳಿಗಳಲ್ಲಿ ಸಾಧಾರಣ ಕೆಲಸಕ್ಕೆ ೩-೪ ಆಣೆ ದಿನಗೂಲಿ ಕೊಡುವುದು ರಷ್ಯಾದಲ್ಲಿ ಸಾಧಾ ರಣ ಕೆಲಸಕ್ಕೆ ಈಗ ಕೊಡುವ ದಿನಗೂಲಿಯ ಪ್ರಮಾಣಕ್ಕಿಂತಲೂ ಹೆಚ್ಚು. ಆ ಕನಿಷ್ಠ ಪ್ರಮಾಣವನ್ನು ಸ್ಥಿರಪಡಿಸಿಲ್ಲ, ಕ್ರಮೇಣ ಹೆಚ್ಚಿಸಲೂಬಹುದು.

ಆಮೇಲೆ ಗಾಂಧೀಜಿ ತಮ್ಮ ಅಧೀನದಲ್ಲಿರುವ ಕೈಗಾರಿಕೆಯಲ್ಲಿ ರಾಷ್ಟ್ರೀ ಕರಣದ ವಿಚಾರಕ್ಕೆ ಒಂದು ವ್ಯಾವಹಾರಿಕ ರೂಪವನ್ನು ಕೊಟ್ಟಿದ್ದಾರೆ. ಶಬ್ದಾಡಂ ಬರವನ್ನು ತೆಗೆದುಹಾಕಿದರೆ ಸಮಾಜವಾದದಲ್ಲಿ ಉಳಿಯುವುದೇನು ? ವ್ಯಕ್ತಿ ತಾನು ಸಮಾಜಕ್ಕೆ ಎಷ್ಟು ಕೊಡುತ್ತಾನೋ ಅಷ್ಟಕ್ಕಿಂತ ಹೆಚ್ಚಾಗಿ ಸಮಾಜ ದಿಂದ ಪಡೆಯಬಾರದು. ಯಾವ ಬಗೆಯ ಶೋಷಣವೂ ಇರಬಾರದು ಇಷ್ಟೆ. ಖಾದಿಯಲ್ಲಿ ಗಾಂಧೀಜಿ ಈ ವಿಚಾರಕ್ಕೆ ರೂಪು ಕೊಟ್ಟಿದಾರೆ. ಖಾದಿ ರಾಷ್ಟ್ರೀಯ ಕೈಗಾರಿಕೆ. ತನ್ನ ದೇಶಬಾಂಧವರಿಗಾಗಿ ಬಟ್ಟೆ ಕೊಳ್ಳುವವನು ಸ್ವಲ್ಪ ಹೆಚ್ಚು ಭಾರ ಹೊರುತ್ತಾನೆ. ಪ್ರಮಾಣಿತ ಖಾದಿಯನ್ನೇ ಬಳಸಬೇಕು, ಬೇರೆ ಯಾವುದೂ ಕೂಡದು ಎಂದು ಒತ್ತಾಯ ಮಾಡಿ ಖಾಸಗಿ ಉತ್ಪಾದಕರು ಈ ರಾಷ್ಟ್ರೀಯ ಕೈಗಾರಿಕೆಯನ್ನು ಶೋಷಣಕ್ಕಾಗಿ ಉಪಯೋಗಿಸದಂತೆ ಕಾಪಾಡಲು ಪ್ರಯತ್ನಿಸು

ತ್ತಿದ್ದಾರೆ. ಗಾಂಧೀಜಿ ಕೊಳ್ಳುವವನು ಹೆಚ್ಚಿನ ಬೆಲೆ ಕೊಟ್ಟರೆ ಅದು ವ್ಯಕ್ತಿಯ ಲಾಭಕ್ಕಲ್ಲ. ಸಮಾಜದ ಹಿತಕ್ಕಾಗಿ. ಆದುದರಿಂದಲೇ ಖಾಸಗಿ ವರ್ತಕನಿಗೆ, ಉತ್ಪಾದಕನಿಗೆ ಪ್ರಮಾಣಪತ್ರವನ್ನು ಕೊಡುವ ಮೊದಲು ಚರಖಾ ಸಂಘದ ಮೂಲಕ ರಾಷ್ಟ್ರೀಯ ನಿಯಂತ್ರಣದ ನಿಯಮಗಳನ್ನು ಅವನು ಪಾಲಿಸಬೇಕಾಗುತ್ತದೆ. ಗೊತ್ತುಪಡಿಸಿದ ಕನಿಷ್ಠ ದಿನಗೂಲಿ ಕೊಟ್ಟಿದಾರೆ ಎಂದು ಸಮಾಧಾನವಾದ ಮೇಲೆ ಸಂಘ ಪ್ರಮಾಣಪತ್ರವನ್ನು ಕೊಡುತ್ತದೆ. ಸಂಘವೇ ಬೆಲೆ, ಲಾಭಗಳನ್ನು ನಿರ್ಧರಿಸುತ್ತದೆ. ಕೆಲಸಗಾರ, ಕೊಳ್ಳುವವನು ಇಬ್ಬರದೂ ಶೋಷಣೆಯಾಗದಂತೆ ಸರ್ವಪ್ರಯತ್ನವನ್ನೂ ಮಾಡುತ್ತಾರೆ. ಹಿಂದುಸ್ತಾನದಲ್ಲಿ ಗಿರಾಕಿಯ ದೇಶಭಕ್ತಿಯನ್ನು ಎಷ್ಟು ಬಗೆಯಲ್ಲಿ ಉತ್ಪಾದಕರು ತಮ್ಮ ಲಾಭಕ್ಕೆ ಉಪಯೋಗಿಸಿಲ್ಲ ! ಆದರೂ ಪ್ರಮಾಣಪತ್ರದ ಮೂಲಕ ನಡೆವ ಈ ಕನಿಷ್ಟ ಪ್ರಮಾಣದ ಕೂಲಿ, ಬೆಲೆಗಳ ನಿರ್ಧಾರವನ್ನು ಕೂಡ ನಮ್ಮ ತೀವ್ರಗಾಮಿ ಗೆಳೆಯರೇ ವಿರೋಧಿಸಿದಾರೆ. ಆಶ್ಚರ್ಯ ! ಶಬ್ದಗಳ ಬಲೆಯಲ್ಲಿ ಸಿಕ್ಕಿರದಿದ್ದರೆ ಆರ್ಥಿಕ ರಾಜಕೀಯ ವ್ಯವಹಾರದಲ್ಲಿ ಗಾಂಧೀಜಿಗೂ ಈ ಸಮಾಜವಾದಿ ಟೀಕೆಗಾರರಿಗೂ ಭೇದ ಬಹಳ ಸ್ವಲ್ಪ ಎಂಬುದು ಸುಲಭವಾಗಿ ಅರ್ಥವಾಗುತ್ತಿತ್ತು. ಎರಡರಲ್ಲಿ ದೃಷ್ಟಿ ಬೇರೆ, ಮಾರ್ಗವೂ ಬೇರೆ. ಆದರೆ ಸುಧಾರಣೆಗಾಗಿ ಮಾಡಿದ ಯೋಜನೆಗಳು ಮಾತ್ರ ಹೆಚ್ಚು ಕಡಿಮೆ ಒಂದೇ. ಆರ್ಥಿಕ ಕ್ಷೇತ್ರದಲ್ಲಿ ಗಾಂಧೀಜಿಯ ಸಮಾಜವಾದ ಕುಟುಂಬಕ್ಕೆ ಪರಿಮಿತವಾಗಿ ಖಾಸಗಿ ಸೊತ್ತು, ವಿಕೇಂದ್ರಿಕೃತ ಕೈಗಾರಿಕೆಗಳಿಗೆ ಹೊಂದಿಕೊಂಡಿದೆ. ಅವಿಯ ಯುಗದಲ್ಲಿ, ಅನಿಯಂತ್ರಿತ ವ್ಯಾಪಾರದ ಹಾವಳಿಗೆ ೧೯ ನೇ ಶತಮಾನದ ಅರಾಜಕ ವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿ ಹುಟ್ಟಿದ ಸಾಂಪ್ರದಾಯಿಕ ಸಮಾಜವಾದ ಭಾರಿ ಕೇಂದ್ರೀಯ ಉದ್ಯೋಗಕ್ಕೆ ಹೊಂದಿಕೊಂಡು ಎಲ್ಲ ಬಗೆಯ ಖಾಸಗಿ ಸೊತ್ತಿಗೂ ಅದಕ್ಕೆ ಆಧಾರವೆನಿಸಿದ ಕುಟುಂಬ ಪದ್ಧತಿಗೂ ವಿರುದ್ಧವಾಗಿದೆ

ಶಿಕ್ಷಣದಲ್ಲೂ ರಷ್ಯಾದ ಪ್ರಯೋಗ ಗಾಂಧಿ ಯೋಜನೆಯನ್ನು ಬಹಳ ಮಟ್ಟಿಗೆ ಹೋಲುತ್ತದೆ. ಸೋವಿಯೆಟ್ ಶಿಕ್ಷಣದಲ್ಲಿ ಲೆನಿನ್ ಮೊಟ್ಟಮೊದಲು ಮಾಡಿದುದು ಇಡೀ ಶಿಕ್ಷಣವನ್ನೇ ವಿವಿಧೋದ್ಯೋಗ ಶಿಕ್ಷಣವಾಗಿ ಮಾಡಲು ಒತ್ತಾಯ. ತನ್ನ ಹೆಂಡತಿ ಒಂದು ಶಿಕ್ಷಣ ಸಮ್ಮೇಳನದಲ್ಲಿ ಭಾಷಣ ಮಾಡಿದಾಗ ವಿವಿಧೋದ್ಯೋಗ ಶಿಕ್ಷಣವನ್ನು ಕುರಿತು ಸಾಕಷ್ಟು ಒತ್ತಿ ಹೇಳಲಿಲ್ಲವೆಂದು ಲೆನಿನ್ ಹೇಗೆ ಬಹಳ ಅತೃಪ್ತನಾದನೆಂದು "ಸೋವಿಯೆಟ್ ಶಿಕ್ಷಣ" ಎಂಬ ಪುಸ್ತಕದಲ್ಲಿ ಬಿಯಾಟ್ರಿಸ್ ಕಿಂಗ್ ತಿಳಿಸಿವಾಳೆ. "ಉದ್ಯೋಗಾಧಾರಿತ ಶಿಕ್ಷಣದ ವಿಷಯ ಕೇವಲ ವಿದ್ಯಾಭ್ಯಾಸದ ಪ್ರಶ್ನೆಯಲ್ಲ, ಇಡೀ ರಾಜಕೀಯದ ಪ್ರಶ್ನೆ.

ಇಡೀ ಜೀವನದ ಧಾಟಿಯನ್ನೇ ಆಮೂಲಾಗ್ರವಾಗಿ ಪುನರ್ರಚಿಸುವ ಪ್ರಶ್ನೆ, ಬುದ್ಧಿಜೀವಿ-ಶ್ರಮಜೀವಿ ಎಂಬ ವಿಭಾಗದ ಭೇದವನ್ನೇ ಪೂರ್ಣವಾಗಿ ಅಳಿಸಿಹಾಕುವ ಪ್ರಶ್ನೆ. ಇದನ್ನು ಅರ್ಥಮಾಡಿಕೊಳ್ಳಬೇಕೆಂದು ಆತನ ಆಗ್ರಹ."

ವಿದ್ಯಾಭ್ಯಾಸವನ್ನು ವಿವಿಧೋದ್ಯೋಗ ಶಿಕ್ಷಣವಾಗಿಸಬೇಕು ಎಂದರೆ ಲೆನಿನ್‌ನ ಅರ್ಥವೇನು ? ಬರೀ ಔದ್ಯೋಗಿಕ ಶಿಕ್ಷಣ ಕೊಟ್ಟರೆ ಸಾಕೆಂದು ಆತನ ಅಭಿಪ್ರಾಯವಲ್ಲ. ರಷ್ಯಾದಲ್ಲಿ ಔದ್ಯೋಗಿಕ ಶಿಕ್ಷಣ ೧೫-೧೬ ವರ್ಷ ವಯಸ್ಸಾದಾಗಲೇ ಪ್ರಾರಂಭ. ಹಾಗಾದರೆ ಆತನ ಅಭಿಪ್ರಾಯವೇನು? ಬ್ರಿಯಾಟ್ರಿಸ್‌ಕಿಂಗ್ ವಿವರಿಸಿದಾಳೆ: ವಿವಿಧೋದ್ಯೋಗ ಶಿಕ್ಷಣ ಸಿದ್ಧಾಂತವೂ ಹೌದು, ಪದ್ಧತಿಯೂ ಹೌದು. ಸಿದ್ಧಾಂತವಾಗಿ ಶಿಕ್ಷಣವನ್ನೂ ಜೀವನವನ್ನೂ ಸಮನ್ವಯಗೊಳಿಸುತ್ತದೆ. ಪದ್ಧತಿಯಾಗಿ ಮಕ್ಕಳು ಸಮಾಜದಲ್ಲಿ ಕುಶಲರೂ ಬುದ್ಧಿವಂತರೂ ಆದ ಕೆಲಸಗಾರರಾಗುವಂತೆ ತಯಾರು ಮಾಡುತ್ತದೆ." ರಷ್ಯಾದಲ್ಲಿ ಕೆಲಸಗಾರ ಎಂದರೇನು ? ಮುಖ್ಯವಾಗಿ ಪೂರ್ಣವಿಕಾಸಗೊಂಡ ವ್ಯಕ್ತಿ. ಹಿಂದಿನ ಕಾಲದ ವಿದ್ಯಾವಂತರಿಗಿದ್ದಷ್ಟೇ ಕಲಾಭಿರುಚಿ, ಶಾಸ್ತ್ರವ್ಯಾಸಂಗ ಇವನಿಗೂ ಬೇಕು. ಹೊಸ ಕಾಲದ ವಿದ್ಯಾವಂತನಾಗಬೇಕು ಇವನು. ಆದುದರಿಂದ ಕೆಲಸಗಾರನಿಗೆ ಬರೀ ಉದ್ಯೋಗ ಜ್ಞಾನ, ನಿಪುಣತೆ ಇದ್ದರೆ ಸಾಲದು. ಅದಕ್ಕಿಂತ ಹೆಚ್ಚು ಬೇಕು. ಕೈಗಳು ಮಾತ್ರ ನಿಪುಣತೆ ಪಡೆದರೆ ಇನ್ನು ಮುಂದೆ ಸಾಲದು. ತಾವು ಬಯಸುವ ವಸ್ತುವಿನ ಜ್ಞಾನ, ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಆಯಾ ಪದಾರ್ಥದ ಸ್ಥಾನದ ಅರಿವು ಬೇಕು ...ಮನುಷ್ಯ-ಪ್ರಕೃತಿಗಳ ಸಂಬಂಧ, ಪರಸ್ಪರ ಪ್ರಭಾವ ತಿಳಿದಿರಬೇಕು....ಕೆಲಸಗಾರ ತನ್ನ ಕೆಲಸವನ್ನು ಬುದ್ಧಿಪೂರ್ವಕ ಗ್ರಹಿಸಿ ಅದರ ಅರ್ಥವನ್ನೂ ಸಮಾಜದ ವ್ಯವಸ್ಥೆಯಲ್ಲಿ ಅದರ ಮಹತ್ವವನ್ನೂ ಅರಿತುಕೊಳ್ಳುವಂತೆ ತತ್ವ, ಆಚರಣೆ, ಎರಡನ್ನೂ ಸರಿಯಾಗಿ ಪೋಣಿಸಬೇಕು. ವಿವಿಧೋದ್ಯೋಗ ಶಿಕ್ಷಣ ಎಂದರೇ ಇದೆಲ್ಲವೂ."

ಶಿಕ್ಷಣ ಸಮ್ಮೇಳನವೊಂದರಲ್ಲಿ ಮಾತಾಡುತ್ತ ಲೆನಿನ್‌ನ ಜೊತೆಗಾತಿ ಕ್ರುಪ್ಸ್‌ಕಾಯಾ ಹೇಳಿದಳು: "ವಿವಿಧೋದ್ಯೋಗದ ಶಿಕ್ಷಣದ ಗುರಿ ಚೆನ್ನಾಗಿ ವಿಕಾಸಗೊಂಡ ಕೆಲಸಗಾರನ ಸಮಗ್ರಸರ್ವತೋಮುಖ ಶಿಕ್ಷಣ. ಅವನು ತನ್ನ ಕೈಗಾರಿಕೆಯಲ್ಲಿ ದುಡಿತಗಾರನೂ ಆಗಬೇಕು, ನಿಪುಣನೂ ಆಗಬೇಕು. ಇಲ್ಲಿಯವರೆಗೆ ವರ್ಷಗಟ್ಟಲೆ ಅನುಭವದಿಂದ ತನ್ನ ಕೆಲಸದಲ್ಲಿ ಮಾತ್ರ, ಪರಿಮಿತ ಕ್ಷೇತ್ರದಲ್ಲಿ ನೈಪುಣ್ಯವನ್ನು ಪಡೆಯುತ್ತಿದ್ದ ಕೆಲಸಗಾರ. ತನ್ನ ಕೈಗಾರಿಕೆಯ ಹೊರತು ಬೇರೆ ಯಾವುದರ ಜ್ಞಾನವೂ ಅವನಿಗೆ ಇರುತ್ತಿರಲಿಲ್ಲ, ಅನೇಕ ವೇಳೆ ತೀರಾ ಸುಲಭವಾದ ಲೆಕ್ಕವನ್ನು ಮಾಡಲಿಕ್ಕೂ ಬರುತ್ತಿರಲಿಲ್ಲ. ಹಳೆಯ

ಮೇಸ್ತ್ರಿಯನ್ನು ನೋಡಿರಿ. ಅತ್ಯಂತ ಸರಳವಾದ ಲೆಕ್ಕವನ್ನು ಸಹ ಮಾಡಲಾರ. ಅವನ ಕೆಲಸಕ್ಕೆ ಅತ್ಯಗತ್ಯವಾದ ರೇಖಾಗಣಿತದ ಸಾಮಾನ್ಯ ಪ್ರಾಥಮಿಕ ಜ್ಞಾನವೂ ಇಲ್ಲ. ನಮಗೀಗ ಬೇಕಾದುದು ತೀರಾ ಬೇರೆ ಬಗೆಯ ಶಿಕ್ಷಣ; ಉತ್ಪಾದಕ ಶ್ರಮವನ್ನೂ, ವೈಜ್ಞಾನಿಕ ಶಿಕ್ಷಣವನ್ನೂ ಒಟ್ಟಾಗಿ ಹೆಣೆಯುವ ಶಿಕ್ಷಣ. ಪರಿಮಿತವಾದ ಕೈಗಾರಿಕೆಯ ತರಬೇತನ್ನೆ ವಿವಿಧೋದ್ಯೋಗ ಶಿಕ್ಷಣವೆಂದು ತಪ್ಪಾಗಿ ತಿಳಿದರೆ ಬಹಳ ಅಪಾಯಕರ ಎಂದು ಶ್ರೋತೃಗಳಿಗೆ ಆಕೆ ಎಚ್ಚರಿಕೆ ಕೊಟ್ಟಳು.

ಈ ಎಚ್ಚರಿಕೆ ರಷ್ಯಾಕಿಂತ ಹಿಂದೂಸ್ಥಾನದಲ್ಲಿ ಹೆಚ್ಚು ಅವಶ್ಯಕ. ಬಲಾತ್ಕಾರದಿಂದಲೋ, ರಷ್ಯಾ ಜನರ ಸ್ವಭಾವವೇ ಹಾಗೋ, ಅಂತು ರಷ್ಯಾ ಜನ ಹೇಳಿದಂತೆ ಮಾಡುತ್ತಾರೆ, ಅಪ್ಪಣೆಗಳನ್ನು ಸಿದ್ಧವಾಗಿ ನಡೆಸುತ್ತಾರೆ. ನಮ್ಮಲ್ಲಾದರೋ ತದ್ವಿರುದ್ಧ. ಗಾಂಧೀಜಿಯ ವಿಚಾರಗಳನ್ನು ಒಪ್ಪಿಕೊಂಡರೂ ಅವನ್ನು ಹೇಗೆ ನಡೆಸಬೇಕೆಂದು ಗಾಂಧೀಜಿ ಬಯಸುತ್ತಾರೋ ಹಾಗೆ ಜನರು ನಡೆಸರು. ಅವರ ಶಿಕ್ಷಣ ಯೋಜನೆಯ ವಿಷಯದಲ್ಲಂತೂ ಅನೇಕ ಸ್ಥಳಗಳಲ್ಲಿ ಬರೀ ಕೈಗಾರಿಕೆಯ ತರಬೇತನ್ನೆ ಗಾಂಧೀಜಿಯ ಸ್ವಮನ್ವಯ ಪೂರ್ಣಸಮಗ್ರ ಶಿಕ್ಷಣವೆಂದು ಜನರು ತಪ್ಪು ತಿಳಿದುದನ್ನು ಈ ಲೇಖಕ ನೋಡಿದಾನೆ. ಅಂಥ ಔದ್ಯೋಗಿಕ ಶಿಕ್ಷಣ ಯೋಜನೆ ವಿಫಲವಾಗಿ ತೀರುತ್ತದೆ. ವೆಚ್ಚವೇನೋ ಅತಿಭಾರ, ಫಲಮಾತ್ರ ಅತ್ಯಲ್ಪ. ಹೀಗಾಗಿ ನಿರಾಶೆಗೊಂಡು ಆ ಯೋಜನೆಯನ್ನೆ ಕೈಬಿಡುವಂತಾಗುತ್ತದೆ. ಈ ಪ್ರಯೋಗ ಮಾಡಿದವರು ವಿಫಲರಾದರೆ ಗಾಂಧೀಜಿಯ ವಿಚಾರವೇ ವಿಫಲವಾಯಿತೆಂದು ಸಂಭ್ರಮದಿಂದ ಸಾರಿ ಹೇಳಿದಂತೆ. ಭಂಗಗೊಳಿಸುವುದು ಕೇವಲ ರಾಜಕೀಯ ವಿರೋಧಿಗಳದೇ ಗುತ್ತಿಗೆಯಲ್ಲ. ಒಳಗೆ ದೃಢ ವಿಶ್ವಾಸವಿಲ್ಲದೆ ರಾಜಕೀಯ ಕಾರಣಗಳ ಒತ್ತಾಯದಿಂದಲೋ ಅನುಕೂಲ ಸಿಂಧು ಬುದ್ಧಿಯಿಂದಲೋ ಮಾಡಿದ ಹೊರಗಣ ಆಚಾರವೂ ಹಾನಿಕಾರಕವೇ. ಕೆಲವು ಕಡೆ ಸುಧಾರಣೆಗಳನ್ನು ಸೂಚಿಸಲು ನೇಮಿಸಿದ ಸಮಿತಿಗಳು ಎಲ್ಲೆಲ್ಲೂ ಎಲ್ಲರೂ ತಿರಸ್ಕರಿಸಿದ ಹಳೆಯ ಪದ್ಧತಿಯನ್ನು ಎತ್ತಿಹಿಡಿಯಲಾರದೆ, ತಮ್ಮದು ಯಾವುದೂ ರಚನಾತ್ಮಕ ವಿಚಾರವಿಲ್ಲದೆ ಇದಿರಿಗೆ ಸಿದ್ಧವಾಗಿದ್ದ ಗಾಂಧೀ ಯೋಜನೆಯನ್ನು ಅಂಗೀಕರಿಸಿದುದರಿಂದ ಮೂಲಶಿಕ್ಷಣ ಯೋಜನೆಗೆ ಒಪ್ಪಿಗೆಯ ಮುದ್ರೆ ಬಿದ್ದಿದೆ. ಆ ಯೋಜನೆಯ ಪರಿಣಾಮವೇನೋ ಪೂರ್ಣವಾಗಿ ಅರ್ಥವಾಗಿಲ್ಲ. ಸಾಲದುದಕ್ಕೆ ಶ್ರದ್ಧೆ, ಕಾರ್ಯೋತ್ಸಾಹ ಎರಡೂ ಇಲ್ಲದ ಸರಕಾರಿ ನೌಕರರು ಈ ಯೋಜನೆಯನ್ನು ನಡೆಸುತ್ತಿದ್ದಾರೆ.

ವಿದ್ಯಾಭ್ಯಾಸವನ್ನು ವಿವಿಧೋದ್ಯೋಗ ಶಿಕ್ಷಣವಾಗಿ ಮಾಡಬೇಕೆಂಬ ಸಾರ್ವ

ತ್ರಿಕ ಶಾಸನ ಮಾಡಿದಾಗ ರಷ್ಯಾದಲ್ಲಿ ಒಂದು ಹಳ್ಳಿಯಲ್ಲಿ ನಡೆದ ಸಂಗತಿ ರಷ್ಯಾದಲ್ಲಿ ಎಷ್ಟು ಶ್ರದ್ಧೆಯಿಂದ ಆಜ್ಞಾಪಾಲನೆಮಾಡುತ್ತಾರೋ ತಿಳಿಸುತ್ತದೆ. "ಪ್ರತಿಯೊಂದು ಪಾಠಶಾಲೆಯೂ ಒಂದು ಉತ್ಪಾದನಾ ಕೇಂದ್ರಕ್ಕೆ – ಒಂದು ಕಾರಖಾನೆಗೋ ಸರಕಾರಿ ಅಥವಾ ಸಾಮೂಹಿಕ ವ್ಯವಸಾಯ ಕ್ಷೇತ್ರಕ್ಕೋ – ಜೋಂದಿಕೊಂಡಿರಬೇಕು ಎಂದು ಅಪ್ಪಣೆಯಾಯಿತು. ತಜಕಿಸ್ತಾನದ ಒಂದು ಹಳ್ಳಿಗೆ ಈ ಅಪ್ಪಣೆ ಬಂತು. ಆ ಹಳ್ಳಿಗೆ ಹತ್ತಿರ ಕಾರಖಾನೆಯೂ ಇರಲಿಲ್ಲ, ವ್ಯವಸಾಯ ಕ್ಷೇತ್ರವೂ ಇರಲಿಲ್ಲ. ಆದರೂ ಅಪ್ಪಣೆಯನ್ನು ಪಾಲಿಸಲೇ ಬೇಕು. ಶಿಕ್ಷಣ ಸಮಿತಿಯ ಸದಸ್ಯನೊಬ್ಬನಿಗೆ ಆ ಹಳ್ಳಿಯಲ್ಲಿ ಒಂದು ಕ್ಷೌರದಂಗಡಿಯಿದ್ದುದು ನೆನಪಾಯಿತು. ಅದನ್ನೇ ಉತ್ಪಾದಕ ಕೇಂದ್ರವೆಂದು ಆ ಅಂಗಡಿಗೆ ಪಾಠಶಾಲೆಯನ್ನು ಗಂಟು ಹಾಕಿದರು."

ಸ್ಥಳ ಸಂಕೋಚವಿಲ್ಲದಿದ್ದರೆ ರಷ್ಯನ್ ಗ್ರಂಥಗಳಿಂದ ಇನ್ನೂ ವಿಸ್ತಾರವಾಗಿ ಉದ್ಧರಿಸಿದ್ದರೆ ಸ್ವಾರಸ್ಯವಾಗಿರುತ್ತಿತ್ತು. ಹಿಂದುಸ್ತಾನದ ಮಾರ್ಕ್ಸ್‌ವಾದಿಗಳಿಗೆ ಅಪರ ಧರ್ಮಗ್ರಂಥದ ಜ್ಞಾನವನ್ನೇ ಕೊಡಬಹುದಿತ್ತು. ಸ್ನೇಹದ ಸೂಚನೆಗೆ ಅವಕಾಶವಿದೆ ಎಂದರೆ ಹೇಳುತ್ತೇನೆ: ಹಿಂದುಸ್ತಾನದ ಸಮಾಜವಾದಿಗಳು ಗಾಂಧೀಜಿಯ ಯೋಜನೆಯನ್ನು ಗಾಂಧೀಜಿ ಬಯಸುವ ರೀತಿಯಲ್ಲಿ ನಡೆಸಿ ನೋಡಲಿ, ಇತರ ದೇಶಗಳಲ್ಲಿ ಇತರ ಸನ್ನಿವೇಶಗಳಲ್ಲಿ ರೂಪುಗೊಂಡ ಸೂತ್ರ, ಉದ್ಘೋಷಗಳಿಲ್ಲದೆ ಸಮಾಜವಾದದ ಕಾರ್ಯಾಚರಣೆಯ ಪ್ರತ್ಯಕ್ಷ ಜ್ಞಾನವನ್ನು ಪಡೆದಾರು. ಅದೇನಿಜವಾದ ಜಿಜ್ಞಾಸೆ, ತಥ್ಯ, ಪರಾಮರ್ಶೆ; ಈಗ ನಡೆಯುತ್ತಿರುವ ಒಣ ತತ್ತ್ವದ ಬರಿಮಾತಲ್ಲ. ಆದರೆ ಆಧುನಿಕತೆಯ ವೇಷ ತೊಡದೆ, ಪಶ್ಚಿಮದಲ್ಲಿ ಬಳಕೆಯಲ್ಲಿರುವ ಅಲಂಕಾರದ ನುಡಿಯನ್ನು ಆಡದೆ ಬಂದ ಯಾವ ಸುಧಾರಣಾ ಯೋಜನೆಯನ್ನೇ ಆಗಲಿ ನಮ್ಮಗೆಳೆಯರು ಒಪ್ಪುವರೆ? ★(ಮುಂದುವರಿಯುವುದು)

೧೨ ಪುಟದಿಂದ.... ಜಾಗತೀಕರಣ

ನಮ್ಮ ಸಂಸ್ಕೃತಿ ತನ್ನತನವನ್ನು ಉಳಿಸಿಕೊಂಡೀತೆ ಎಂಬ ಆತಂಕ ಎಲ್ಲರನ್ನೂ ಕಾಡಿದೆ. ಯಾವುದು ಸತ್ಯವೊ, ಯಾವುದು ಸಾರವಾದದ್ದೊ ಅದು ಮಾತ್ರ ಉಳಿದು ಹೊಸದಾಗಿ ಆವರಿಸಿದ ಭ್ರಮೆಗಳೆಲ್ಲವೂ ಒಂದು ದಿನ ಗಾಳಿಗೆ ಚೆದುರುವ ಮೋಡಗಳ ಹಾಗೆ ಚೆದುರಲೇಬೇಕೆಂಬ ಸತ್ಯಕ್ಕೆ ಚ್ಯುತಿ ಇಲ್ಲ. ಅಲ್ಲದೆ ಭ್ರಮೆಗಳು ಚೆದುರಿದ ಮೇಲೆ ಜಾಗತೀಕರಣದ ಮೌಲಿಕ ಉಪಯೋಗಗಳು ನಮ್ಮ ಬದುಕನ್ನು ಆವರಿಸಿದಾಗ ಈ ಭ್ರಮೆಯ ಕಾಲದಲ್ಲಿ ನಾವು ಪಟ್ಟ ಕಷ್ಟ ಅಷ್ಟೊಂದು ದುಬಾರಿಯಾಗಲಿಲ್ಲವೇನೊ ಎನ್ನಿಸಬಹುದು. ಹೀಗೆ ಜಾಗತೀಕರಣದಿಂದ ಒಳಿತನ್ನೇ ಆಶಿಸೋಣ.

('ವಿವೇಕ ಪ್ರಭ' ದ ಸಾಭಾರ)

ವಿಚಾರ ದೀಪ್ತಿ....................

ವ್ಯಕ್ತಿಯೇ ಸಾಮಾಜಿಕ ತತ್ವಜ್ಞಾನದ ಕೇಂದ್ರಬಿಂದು. ಸಾಮಾಜಿಕ ಪರಿವರ್ತನೆಯಿರಲಿ, ರಾಜಕೀಯ ಆಚರಣೆಯಿರಲಿ ಅದು ವ್ಯಕ್ತಿಯ ಪ್ರಾಧಾನ್ಯವನ್ನು ಒಪ್ಪಿಕೊಂಡ ಅವನ ಪರಮಾಧಿಕಾರವನ್ನು ಅವನಿಗೆ ಮರಳಿಕೊಡುವ ಸಾಮಾಜಿಕ ತತ್ವಜ್ಞಾನದಿಂದ ಹೊರಹೊಮ್ಮಬೇಕು. ವ್ಯಕ್ತಿಯು ಸಮಾಜದ ಮೂಲ ಮಾದರಿ. ವ್ಯಕ್ತಿ ವಿಕಾಸವೇ ಎಲ್ಲಾ ಪ್ರಗತಿಯ ಮಾನದಂಡ. ಸಾರ್ವಜನಿಕ ಜೀವನದಲ್ಲಿ ನೀತಿ ಮತ್ತೆ ಸ್ಥಾಪಿತವಾಗಬೇಕಾದರೆ ನೀತಿಯುತ ಜನರಿಂದ ಸಾಧ್ಯವಾಗಬೇಕು. ವಿವೇಕಶಾಲಿಗಳಾದ ವ್ಯಕ್ತಿಗಳಿಂದ ವಿವೇಕಶಾಲಿಯಾದ ಸಮಾಜ. ನೀತಿಯೆಂಬುದು ಮನಃಸಾಕ್ಷಿಯ ಆದೇಶವಾಗಿರುವುದರಿಂದ ಅದರ ಆಚರಣೆ ವ್ಯಕ್ತಿಗಳಿಂದಲೇ ಆಗಬಲ್ಲುದು. ಅಧಿಕಾರದ ಬಳಕೆಯಿಂದ, ಕಾನೂನಿನಿಂದ ಇದು ಸಾಧ್ಯವಿಲ್ಲ. ಬದಲಾಗಿ ಇದು ವ್ಯಕ್ತಿ ವಿಕಾಸಕ್ಕೆ ತಡೆಯಾಗಬಲ್ಲದು. ವ್ಯಕ್ತಿ ಸ್ವಾತಂತ್ರ್ಯದ, ವ್ಯಕ್ತಿಯ ಸಾರ್ವಭೌಮತ್ವದ ನಿರಾಕರಣೆಯಿಂದ ನಿಜವಾದ ವಿಕಾಸ ಸಾಧ್ಯವಿಲ್ಲ. ವ್ಯಕ್ತಿ ವಿಕಸನಕ್ಕೆ ಅಡ್ಡಿಯಾಗಿ ನಿಲ್ಲುವ ಆತಂಕಗಳನ್ನು ನಿಧಾನವಾಗಿ ಕಳಚಿಹಾಕುವುದೇ ಸ್ವಾತಂತ್ರ್ಯ. ಹೀಗೆ ಸ್ವತಂತ್ರರಾದ, ವಿಚಾರಶೀಲರಾದ, ನೀತಿವಂತರಾದ ವ್ಯಕ್ತಿಗಳಿಲ್ಲದೆ ಸಾಧ್ಯವಾಗದು. ಇಂಥ ನೀತಿವಂತರಾದ ವ್ಯಕ್ತಿಗಳ ಸಮುದಾಯವಿರವಾಗ ಮಾತ್ರ ನಮ್ಮ ರಾಜಕೀಯ ವ್ಯವಸ್ಥೆ, ಆರ್ಥಿಕ ಪ್ರಯೋಗಗಳು ಹಾಗೂ ಸಾಮಾಜಿಕ ಪ್ರಗತಿ ನಿಜವಾದ ಅರ್ಥದಲ್ಲಿ ಯಶಸ್ವಿಯಾಗಲು ಸಾಧ್ಯ. ಇದು ರಾಯ್ ಅವರ ಸಾಮಾಜಿಕ ತತ್ವಜ್ಞಾನದ ಚಿಂತನೆ.

–ಆರ್. ಪಿ. ಹೆಗಡೆ

"ಕಾಸು-ಕಾಸು ಸೇರಿಸಿದೆಯಲ್ಲಾ
ರತ್ನ ಕಸಕ್ಕೆ ಹೋಯಿತಲ್ಲಾ"

ಎಂಬ ಕಬೀರರ ವಾಣಿ. ಸಂಪತ್ತನ್ನು ಸೇರಿಸುತ್ತೀಯೆ. ಆದರೆ ನರದೇಹ ವೆಂಬ ಅಮೂಲ್ಯ ರತ್ನ ಕಸದತೊಟ್ಟಿಗೆ ಹೋಗುತ್ತಿದೆ! ನೀನು ಆ ಕಡೆಗೆ ಗಮನ ವೀಯುತ್ತಿಲ್ಲ, ಈ ವಾಕ್ಯದ ಪರಿಣಾಮದಿಂದ ಜಮುನಾಲಾಲರಿಗೆ ಸಂಪತ್ತಿನ ಮೋಹ ಎಳ್ಳಷ್ಟೂ ಉಳಿಯಲಿಲ್ಲ. "ನನ್ನ ಕೈಯಲ್ಲಿರುವ ಹಣ ಒಂದು ಉಪಾಧಿ. ಅದರಿಂದ ಎಷ್ಟು ಬೇಗ ಬಿಡುಗಡೆ ಹೊಂದಬಹುದೋ ಅಷ್ಟು ಒಳ್ಳೆಯದು. ಆದರೆ ಹಣವನ್ನು ಹಾಗೆಯೇ ಎಸೆದುಬಿಟ್ಟರೆ ಬಿಡುಗಡೆ ಸಾಧ್ಯ ವಿಲ್ಲ. ವ್ಯರ್ಥ ದಾನವೂ ಸರಿಯಲ್ಲ. ಯೋಗ್ಯ ಮನುಷ್ಯರಿಗೆ ದಾನ ಕೊಟ್ಟಾಗ ಮಾತ್ರ, ಅದರ ಉಪಯೋಗವಿದೆ. ಜಮುನಾಲಾಲ್ ಹೀಗೆಯೇ ಮಾಡುತ್ತಿ ದ್ದರು. ಯೋಗ್ಯರನ್ನು ಹುಡುಕುತ್ತಾ ಇರುತ್ತಿದ್ದರು ಮತ್ತು ಹಣ ಕೊಡುತ್ತಾ ಇರುತ್ತಿದ್ದರು. ಹೀಗೆ ಮಾಡಿದಾಗ ಹಣ ಚರಿತಾರ್ಥವಾಗುತ್ತದೆಂದು ಅವರು ತಿಳಿದಿದ್ದರು. ದಾನ ಪಡೆದವರಿಂದಲೇ ತಮಗೆ ಉಪಕಾರವಾಯಿತೆಂದು ತಿಳಿಯು ತ್ತಿದ್ದರು. ಎರಡನೆಯ ವಾಕ್ಯ ತುಕಾರಾಮರದು:-

ನುಡಿದಂತೆ ನಡೆದವನ
ಪಾದ ಹಿಡಿಯುವೆ ಅವನ

ನಾವು ಮಾತನಾಡಿದಂತೆಯೇ ಆಚರಣೆ ಇರಬೇಕೆಂಬ ಚಿಂತೆ ಸದಾ ಅವರ ದಾಗಿರುತ್ತಿತ್ತು.

ಜಮುನಲಾಲರದು ಅಸಾಧಾರಣ ವ್ಯಕ್ತಿತ್ವವೇನಲ್ಲ. ಆದರೂ ಕೂಡ ಕಳೆದ ಮೂವತ್ತು-ಮೂವತ್ತೈದು ವರ್ಷಗಳಲ್ಲಿ ಇನ್ನೋರ್ವ ಜಮುನಾಲಾಲ ಹುಟ್ಟಿಬರ ಲಿಲ್ಲವೆಂಬುದು ಕೂಡ ಅಷ್ಟೇ ನಿಜ. ಅವರು ವ್ಯವಸಾಯ - ವಾಣಿಜ್ಯಗಳಲ್ಲಿ ಬಹಳಷ್ಟು ಕೆಲಸ ಮಾಡಿದರು. ಮಹಿಳಾಶ್ರಮ ಮುಂತಾದ ಸಂಸ್ಥೆಗಳನ್ನು ಕಟ್ಟಿದರು. ಬಾಪೂರ ಅನೇಕ ಕೆಲಸಗಳಲ್ಲಿ ಸಹಯೋಗ ಕೊಟ್ಟರು. ಕೊನೆಯ ಕೆಲಸವಾಗಿ ಅವರು ಗೋಸೇವೆಯನ್ನು ಕೈಗೆತ್ತಿಕೊಂಡರು. ಗೋಸೇವೆಯ ಸರ್ವೋತ್ತಮ ಉದಾಹರಣೆ ಕೃಷ್ಣ. ಆ ಕೃಷ್ಣನ ನಂತರ ಬೇರೆ ಯಾರಾದರೂ ಇದ್ದರೆ ಅದು ಜಮುನಾಲಾಲ. ಅವರು ಗೋಸೇವೆಯೊಂದಿಗೆ ತನ್ಮಯರಾಗಿ ದ್ದರು. ಆ ಕೆಲಸಕ್ಕಾಗಿ ತಮ್ಮ ದೊಡ್ಡ ಮಹಲನ್ನು ಬಿಟ್ಟು ತಾವು ಒಂದು ಗುಡಿಸಲಲ್ಲಿ ಇರಲು ಪ್ರಾರಂಭಿಸಿದರು. ಮಹಾನುಭಾವರ ಸಾಲಿನಲ್ಲಿ, ಸಣ್ಣ ಸ್ವರೂಪವೇ ಇರಬಹುದು, ಜಮುನಾಲಾಲರಿಗೂ ಸ್ಥಾನವಿದೆ. ★

('ಮೈತ್ರಿ' ಸಾಭಾ : ಅನು : ಸು ಕಾ)

ಹತ್ತನೇ ಪಂಚವಾರ್ಷಿಕ ಯೋಜನೆಯ ಗುರಿ ಅವಾಸ್ತವವಾಗಿದೆ !

–ಆದಿತ್ಯರಾಜ್ ದಾಸ್

ಈಗ ದೇಶದ ಹಣಕಾಸಿನ ಸ್ಥಿತಿಯಲ್ಲಿ ಬಹಳಷ್ಟು ಅಸ್ಥಿರತೆ ಇದೆ. ಇಂಥ ಸಮಯದಲ್ಲಿ ೨೦೦೨-೨೦೦೭ ನೇ ಸಾಲಿನ ಹತ್ತನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ರಾಷ್ಟ್ರದ ಆಂತರಿಕ ಉತ್ಪಾದನೆ ಶೇಕಡಾ ೯ ರಷ್ಟು ಆಗಬೇಕೆಂದು ಪ್ರಧಾನಿ ವಾಜಪೇಯಿಯವರು ಇತ್ತೀಚೆಗೆ ಒಂಭತ್ತನೇ ಪಂಚವಾರ್ಷಿಕ ಯೋಜನೆಯನ್ನು ಕುರಿತು ಯೋಜನಾ ಆಯೋಗ ನಡೆಸಿದ ಮಧ್ಯಂತರ ಮೌಲ್ಯಮಾಪನಾ ಸಭೆಯಲ್ಲಿ ಹೇಳಿದ್ದಾರೆ. ಇದು ನಿಜವಾಗಿಯೂ ಅಪರ ಮಹತ್ವಾಕಾಂಕ್ಷೆಯನ್ನು ತೋರಿಸುತ್ತದೆ. ಪ್ರಧಾನಿಯವರ ಆಶಯದ ಈಡೇರಿಕೆಗಾಗಿ ಸರಕಾರವು ತನ್ನ ನೀತಿಗಳಲ್ಲಿ ದೂರಗಾಮಿ ಬದಲಾವಣೆಗಳನ್ನು ಮಾಡುತ್ತ ಕಠಿಣವಾದ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆ ಇದೆಯೋ ನೋಡೋಣ.

ಭಾರತ ದೊಡ್ಡ ದೇಶ. ಇಲ್ಲಿರುವ ಬಡತನ ಮತ್ತು ನಿರುದ್ಯೋಗಗಳಂಥ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬೇಕಾದರೆ ತೀವ್ರತಮವಾದ ರಾಷ್ಟ್ರೀಯ ಆಂತರಿಕ ಉತ್ಪಾದನೆ ಅಗತ್ಯವೆಂಬುದನ್ನು ಯಾರೂ ಒಪ್ಪುತ್ತಾರೆ. ಆದರೆ ಈ ಮಹೋನ್ನತ ಉತ್ಪಾದನೆ ಎರಡು ಅಂಶಗಳನ್ನು ಅವಲಂಬಿಸಿದೆ. ಒಂದು, ಯಾವುದಕ್ಕೂ ಜಗ್ಗದ-ಬಗ್ಗದ ಹಣಕಾಸಿನ ಶಿಸ್ತು: ಎರಡು, ಕೆಳ ಮತ್ತು ಮೇಲಿನ ಸ್ತರಗಳಲ್ಲಿರುವ ಹಣಕಾಸಿನ ನಿರ್ವಹಣೆಯಲ್ಲಿ ಅತಿಯಾದ ಕಾಳಜಿ. ಆದ್ದರಿಂದ ಈಗಿನ ಹಣಕಾಸಿನ ವಾಸ್ತವಿಕ ಸಂಗತಿಗಳನ್ನು ಗಮನಿಸಿದಾಗ ಹತ್ತನೇ ಯೋಜನೆಯ ಗುರಿಯನ್ನು ಶೇಕಡಾ ೯ ಕ್ಕೆ ಇಟ್ಟುಕೊಳ್ಳುವುದು ಹಗಲುಗನಸೆಂದೆನಿಸುತ್ತದೆ. ರಾಷ್ಟ್ರೀಯ ಆಂತರಿಕ ಉತ್ಪಾದನೆ ಶೇಕಡಾ ೯ ರಷ್ಟು ಆಗಬೇಕೆಂದು ಹೇಳುವುದರ ಅರ್ಥ: ೨೦೦೬-೦೭ ನೇ ಸಾಲಿನ ವರೆಗೆ ಪ್ರತಿ ವರ್ಷವೂ ಶೇಕಡಾ ೨.೫ ರಷ್ಟು ಹೆಚ್ಚುವರಿ ಬೆಳವಣಿಗೆಯಾಗಬೇಕೆಂಬುದೇ ಆಗಿದೆ. ಮೂಲಭೂತ ಪ್ರಶ್ನೆ: ನಮ್ಮ ದೇಶವು ಇಷ್ಟು ಅಗಾಧ ಪ್ರಮಾಣದ ಉತ್ಪಾದನೆಯನ್ನು ಸಾಧಿಸಬಲ್ಲುದೇ ಎಂಬುದು. ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ಮೌಲ್ಯಮಾಪನವೇ ಆತಂಕಕಾರಿಯಾಗಿದೆ. ಒಂಭತ್ತನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸರಾಸರಿ ರಾ.ಆ.ಉ. ಅನ್ನು ಶೇ. ೬.೫ ರಷ್ಟು ಸಾಧಿಸಬೇಕಾದರೆ ಪ್ರಸ್ತುತ ವರ್ಷ ಮತ್ತು ಮುಂದಿನ ವರ್ಷ ಬೆಳವಣಿಗೆಯ ಪ್ರಮಾಣ ಶೇ. ೭.೧ ಕ್ಕೂ ಹೆಚ್ಚಾಗಿರಬೇಕಾಗುತ್ತದೆ. ಇದು ಚಿಂತಾಸ್ಪದ ಸಂಗತಿಯೇ ಸರಿ. ಹಣಕಾಸಿನ ವ್ಯವ

ಹಾರದಲ್ಲಿ ತೀವ್ರ ಚಲನೆಯನ್ನು ತರಬೇಕೆಂದು ಸರಕಾರ ಸೂಚಿಸುತ್ತದೆ. ಇದು ವರೆಗಿನ ಯೋಜನೆಯಲ್ಲಿಯ ಹಿನ್ನಡೆಯನ್ನು ೨೦೦೧-೨೦೦೨ ನೇ ಸಾಲಿನ ವಾರ್ಷಿಕ ಯೋಜನೆಗೆ ಒಟ್ಟಾರೆ ಬಜೆಟ್ ಬೆಂಬಲವನ್ನು ಕೊಡುವುದರ ಮೂಲಕ ಸರಿಮಾಡಬಯಸುತ್ತದೆ. ಹೀಗೆ ಮಾಡಬೇಕಾದರೆ ಪ್ರಸ್ತುತ ವರ್ಷದ ಒಟ್ಟಾರೆ ಬಜೆಟ್ ಬೆಂಬಲವನ್ನು ಕನಿಷ್ಠ ಶೇಕಡಾ ೪೦ ರಷ್ಟು ಹೆಚ್ಚಿಸಬೇಕಾಗುತ್ತದೆ.

ವ್ಯವಸಾಯ ಕ್ಷೇತ್ರದಲ್ಲಿ ಬೆಳವಣಿಗೆಯು ಶೇ. ೫.೭ ರಷ್ಟು, ಉತ್ಪಾದನಾ ಕ್ಷೇತ್ರದಲ್ಲಿ ಶೇ. ೧೦.೫ ರಷ್ಟು ಹಾಗೂ ವಾಣಿಜ್ಯ ಕ್ಷೇತ್ರದಲ್ಲಿ ಶೇ. [illegible] ರಷ್ಟು ಆಗಬೇಕಾಗುತ್ತದೆ. ಆದರೆ ಕರುಣಾಜನಕವಾದ ಹಣಕಾಸಿನ ವ್ಯವಹಾರದ ಹಿನ್ನೆಲೆಯಲ್ಲಿ ಸರ್ಕಾರವು ಆಗಲೇ ಒಂಭತ್ತನೇ ಯೋಜನೆಯ ಬೆಳವಣಿಗೆಯ ಗುರಿಯನ್ನು ಶೇ. ೭ ರಿಂದ ಶೇ. ೬.೫ ಕ್ಕೆ ಇಳಿಸಿಬಿಟ್ಟಿದೆ. ಇದು ಒಂಭತ್ತನೇ ಯೋಜನೆಯ ಮೂರು ವರ್ಷಗಳ ಅವಧಿಯಲ್ಲಿ ಸಾಧಿತವಾಗಬೇಕಾಗಿದ್ದ ರಾಷ್ಟ್ರೀಯ ಆಂತರಿಕ ಉತ್ಪಾದನೆಯ ಶೇ. ೭ ರಷ್ಟು ಬೆಳವಣಿಗೆಗೆ ಪ್ರತಿಕೂಲವಾಗಿದೆ. ಸಿ.ಎಸ್.ಓ. ಅಂಕಿಸಂಖ್ಯೆಗಳ ಪ್ರಕಾರ ಪ್ರಸ್ತುತ ರಾಷ್ಟ್ರೀಯ ಆಂತರಿಕ ಉತ್ಪಾದನೆಯ ಮೊದಲ ಮೂರು ತಿಂಗಳಲ್ಲಿ ಬೆಳವಣಿಗೆ ಶೇ. ೬.೯ ರಿಂದ ಶೇ. ೫.೮ ಕ್ಕೆ ಇಳಿದಿವೆ. ಅದೇ ರೀತಿ ಕೃಷಿ ಉತ್ಪಾದನೆ ಶೇ. ೪.೯ ರಿಂದ ೨.೫, ಕೈಗಾರಿಕಾ ಬೆಳವಣಿಗೆ ಶೇ. ೬.೭ ರಿಂದ ಶೇ. ೫.೧ ಕ್ಕೆ ಜಾರಿದೆ. ಇಷ್ಟೇ ಅಲ್ಲ, ಹಣಕಾಸಿನ ಸ್ಥಿತಿಯನ್ನು ಉತ್ತಮಗೊಳಿಸುತ್ತಿದೆ ಎಂದು ಭಾವಿಸಲಾಗಿದ್ದ ಸೇವಾ ಕ್ಷೇತ್ರವು ಸಹ ಇಂಥ ಹಿನ್ನಡೆಯನ್ನು ಅನುಭವಿಸುತ್ತಿದೆ. ಇದು ಇನ್ನೂ ಹೆಚ್ಚು ಚಿಂತಾಜನಕವಾದ ಮಾತಾಗಿದೆ. ಕಳೆದ ವರ್ಷದ ಮೊದಲಿನ ನಾಲ್ಕು ತಿಂಗಳಲ್ಲಿ ಹಣಕಾಸಿನ ಸೇವಾ ಕ್ಷೇತ್ರಗಳಲ್ಲಿಯ ಬೆಳವಣಿಗೆ ಶೇಕಡಾ ೧೦ ರಿಂದ ೮ ಕ್ಕೆ ಇಳಿಯಿತು. ಅದೇ ರೀತಿ ಬೇರೆ ಸೇವಾ ಕ್ಷೇತ್ರಗಳಾದ ಸಮುದಾಯ, ಸಾಮಾಜಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಕೂಡ ಶೇ. ೧೧.೨ ರಿಂದ ಶೇ. ೬.೯ ಕ್ಕೆ ಬೆಳವಣಿಗೆ ಇಳಿಮುಖವಾಯಿತು. ಪ್ರಚಲಿತ ವರ್ಷದಲ್ಲಿ ಸಹ ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆಯಿಲ್ಲವಾಗಿದೆ.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಅಧ್ಯಯನದ ಪ್ರಕಾರ ಪ್ರಚಲಿತ ಹಣಕಾಸು ವರ್ಷದಲ್ಲಿ ೧೨೯ ಕೈಗಾರಿಕಾ ಕ್ಷೇತ್ರಗಳಲ್ಲಿ ೫೨ ಕ್ಷೇತ್ರಗಳು ಶೇ. ೧೦ ಕ್ಕೂ ಕಡಿಮೆ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸಿವೆ. ಇದೇ ಅವಧಿಗೆ ಕಳೆದ ವರ್ಷ ಅಂಥ ಕೈಗಾರಿಕಾ ಕ್ಷೇತ್ರಗಳ ಸಂಖ್ಯೆ ೪೧ ಇತ್ತು. ಇದೇ ರೀತಿ ನಕಾರಾತ್ಮಕ ಬೆಳವಣಿಗೆ ಹೊಂದಿದ ಕ್ಷೇತ್ರಗಳ ಸಂಖ್ಯೆ ೧. ರಿಂದ

೨೯ಕ್ಕೆ ಏರಿತು. ಮುಂಗಾರಿನ ಬೆಳೆ ಉತ್ಪನ್ನವೂ ಕೂಡ ೧೦೩.೯ ದಶಲಕ್ಷ ಟನ್‌ಗಳಿಂದ ೧೦೨.೬೯ ದಶಲಕ್ಷ ಟನ್‌ಗಳಿಗೆ ಅಂದರೆ ಶೇ. ೧.೨ ರಷ್ಟು ಇಳಿಮುಖವಾಯಿತು.

ವಾಜಪೇಯಿಯವರ ಈ ಮಹತ್ವಾಕಾಂಕ್ಷೆಗೆ ಪ್ರೇರಣೆ ಏನೆಂದರೆ ಬಹಳ ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಬಹುದು ಮತ್ತು ಆ ಕ್ರೋಢೀಕೃತ ಸಂಪನ್ಮೂಲಗಳನ್ನು ಅಂತರ್‌ಹಂದರ ನಿರ್ಮಾಣಕ್ಕೂ ಮತ್ತು ಅಲಕ್ಷಿತ ಸಾಮಾಜಿಕ ಕ್ಷೇತ್ರಗಳ ಅಭಿವೃದ್ಧಿಗೂ ಉಪಯೋಗಿಸಿಕೊಳ್ಳಬಹುದು. ಈ ಮೂಲವನ್ನು ಆದಾಯದ ಕೊರತೆ ತುಂಬಲು ಉಪಯೋಗಿಸಕೂಡದೆಂದು ನಿರ್ಧರಿಸಬಹುದೆಂಬ.

ಎರಡನೇ ಹಸಿರು ಕ್ರಾಂತಿಯನ್ನು ಸಾಧಿಸಬೇಕೆಂಬ ಉದ್ದೇಶ್ಯದಿಂದ ವಿಸ್ತೃತ ಮತ್ತು ಹೆಚ್ಚು ಬಂಡವಾಳವನ್ನು ಕೃಷಿ ಕ್ಷೇತ್ರದಲ್ಲಿ ತೊಡಗಿಸಲಾಗುವುದು, ಖಜಾನೆಯ ಮೇಲೆ ಹೊರೆ ಆಗುವುದನ್ನು ತಪ್ಪಿಸುವುದಕ್ಕಾಗಿ ಮತ್ತು ಸ್ವತಃ ಹೆಚ್ಚಿನ ಆದಾಯವನ್ನು ಹುಟ್ಟಿಸುವುದಕ್ಕಾಗಿ ಸಾರ್ವಜನಿಕ ಕ್ಷೇತ್ರವನ್ನು ಸುಸ್ಥಿತಿಗೆ ತಂದು, ಹಾಕಿದ ಬಂಡವಾಳಕ್ಕೆ ಕನಿಷ್ಠ ಶೇ. ೧೨ ರಷ್ಟಾದರೂ ಲಾಭ ಬರುವಂತೆ ಮಾಡಲಾಗುವುದು.

ಅಲ್ಲದೆ, ರಾಜ್ಯಗಳ ಮತ್ತು ಕೇಂದ್ರದ ಹಣಕಾಸಿನ ದುಂದುಗಾರಿಕೆಗೆ ಯೋಜನೆಯ ಬಂಡವಾಳ ಹೂಡಿಕೆಯು ತುತ್ತಾಗದಂತೆ ಎಲ್ಲ ಗಂಭೀರ ಪ್ರಯತ್ನವನ್ನೂ ಮಾಡಲಾಗುವುದು. ಮಧ್ಯಂತರಮೌಲ್ಯ ಮಾಪನ ವರದಿ ಸೂಕ್ಷ್ಮವಾಗಿಯೇ ಈ ರೀತಿ ತಿಳಿಸಿದೆ, “ಸಾರ್ವಜನಿಕ ಖರ್ಚುವೆಚ್ಚಗಳೆಲ್ಲಾ ಆಗಿ, ಹಣ ಉಳಿದರೆ, ಅದು ಯೋಜನೆಗೆ ಎಂಬಂಥ ಪರಿಸ್ಥಿತಿ ನಿರ್ಮಾಣವಾಗಕೂಡದು.”

ಒಂಭತ್ತನೇ ಯೋಜನೆಯ ಮಧ್ಯಂತರ ಮೌಲ್ಯಮಾಪನ ವರದಿ ಅಂತರ್ ಹಂದರ ಸಿದ್ಧಗೊಳಿಸಲು ಬಹಳ ದೊಡ್ಡ ಬಂಡವಾಳ ಬೇಕೆಂದು ಸ್ಪಷ್ಟವಾಗಿಯೇ ಹೇಳಿದೆ. ಉದಾಹರಣೆಗೆ, ಇಂದಿನ ದರಗಳ ಮೇರೆಗೆ ೫೦,೦೦೦ ಮೆಗಾ ವಾಟ್ ವಿದ್ಯುತ್‌ಶಕ್ತಿಯನ್ನು ಉತ್ಪಾದಿಸಲು ಹತ್ತನೇ ಯೋಜನೆಯಲ್ಲಿ ಸುಮಾರು ೫೦.೦೦೦ ಕೋಟಿ ರೂಪಾಯಿ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ. ಈ ಹಿನ್ನೆಲೆಯನ್ನು ಗಮನದಲ್ಲಿರಿಸಿಕೊಂಡು ಮುಂದಿನ ಐದು ವರ್ಷಗಳಲ್ಲಿ ಸತತವಾಗಿ ರಾಷ್ಟ್ರೀಯ ಉತ್ಪಾದನಾ ಬೆಳವಣಿಗೆಯನ್ನು ಪ್ರತಿವರ್ಷ ಶೇ. ೯ರಷ್ಟು ಸಾಧಿಸಬೇಕಾದರೆ ಎಷ್ಟು ದೊಡ್ಡ ಗಾತ್ರದ ಬಂಡವಾಳ ಹೂಡಿಕೆ ಬೇಕಾಗುತ್ತದೆಂಬುದನ್ನು ಊಹಿಸಬಹುದಾಗಿದೆ.

ಯೋಜನೆಗೆ ಒಳಪಡದ ಬಾಬುಗಳಿಗೇ ಖರ್ಚು ದ್ವಿಗುಣೋಪಾದಿಯಲ್ಲಿ ಆಗುತ್ತಿರುವುದರಿಂದ ಯೋಜನೆಗಾಗಿ ಹಣವನ್ನು ದೊರಕಿಸುವುದು ಸರ್ಕಾರಕ್ಕೆ ಬಹಳ ಕಷ್ಟವಾಗುತ್ತಿದೆ ಎಂಬುದು ಸಹ ನಿಜ.

ರಾಷ್ಟ್ರೀಯ ಆಂತರಿಕ ಉತ್ಪಾದನೆಯನ್ನು ಬಹಳಷ್ಟು ಹೆಚ್ಚಿಸಬೇಕಾದರೆ ಅದರ ಮತ್ತು ತೆರಿಗೆ ಮಧ್ಯದಲ್ಲಿಯ ಅನುಪಾತವನ್ನು ಹೆಚ್ಚಿಸಬೇಕೆಂದೂ, ಯೋಜನೆ ಮತ್ತು ಯೋಜನೇತರ ಖರ್ಚುಗಳನ್ನು ಗಣನೀಯವಾಗಿ ಕಡಿಮೆ ಮಾಡಬೇಕೆಂದೂ, ವಿದ್ಯುತ್‌ಶಕ್ತಿ ಮತ್ತು ನೀರಾವರಿಗಳಿಂದ ಪ್ರಯೋಜನ ಪಡೆಯುತ್ತಿರುವವರಿಂದ ಹೆಚ್ಚಿಗೆ ಶುಲ್ಕವನ್ನು ವಸೂಲಿಮಾಡಬೇಕೆಂದೂ, ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣಗೊಳಿಸ ಬೇಕೆಂದೂ ಮತ್ತು ಸಬ್ಸಿಡಿಗಳನ್ನು ಕಡಿಮೆಗೊಳಿಸಬೇಕೆಂದೂ ಒಂಭತ್ತನೇ ಯೋಜನೆಯ ಮಧ್ಯಂತರ ಮೌಲ್ಯಮಾಪನ ವರದಿ ಶಿಫಾರಸ್ ಮಾಡಿದೆ. ಈ ಎಲ್ಲ ಮುಂಚೂಣಿಗಳಲ್ಲಿ ಧೈರ್ಯಯುತ ಮತ್ತು ಕಠಿಣ ತೀರ್ಮಾನಗಳನ್ನು ಕೈಗೊಳ್ಳುವುದು ಅಗತ್ಯ ವಾಗುತ್ತದೆ. ಆದರೆ ಸರ್ಕಾರಕ್ಕೆ ಇಂಥ ಕಠೋರ ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ ಇದೆಯೆ?

ಯೋಜನಾ ಸಮಿತಿಯ ಆದ್ಯತೆಗಳಲ್ಲಿ ಸಬ್ಸಿಡಿಗಳನ್ನು ಕಡಿಮೆ ಮಾಡ ಬೇಕೆಂಬುದಾಗಿದೆ. ಈ ಸಬ್ಸಿಡಿಗಳು ರಾಜಕೀಯ ಕಾರಣಗಳಿಂದ ಮತ್ತು ಕೆಲವೊಮ್ಮೆ ಅನಿರೀಕ್ಷಿತ ಪರಿಸ್ಥಿತಿಯ ಕಾರಣದಿಂದ ಹೆಚ್ಚಾಗುತ್ತಲೇ ಇರುತ್ತವೆ. ಇದಕ್ಕೆ ತಕ್ಷಣದ ಉದಾಹರಣೆ ಎಂದರೆ ಇತ್ತೀಚಿಗಿನ ಪೆಟ್ರೋಲಿಯಂ ಉತ್ಪಾದನೆ ಗಳ ಮೇಲಿನ ದರಗಳ ಪುನರ್‌ವಿಮರ್ಷೆ. ಇದರಿಂದಾಗಿ ಬಿಜೇಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಸರ್ಕಾರ ಇಕ್ಕಟ್ಟಿಗೆ ಸಿಕ್ಕಿ ಹಾಕಿ ಕೊಂಡಿತು. ಈ ಒಕ್ಕೂಟದ ಜೊತೆಯಲ್ಲಿ ಇರುವ ತೃಣಮೂಲ ಕಾಂಗ್ರೆಸ್ ಮತ್ತು ತೆಲಗು ದೇಶಂ ಪಕ್ಷಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಬೆಲೆಯನ್ನು ಹಿಂದಕ್ಕೆ ಪಡೆಯಬೇಕೆಂದು ವಾಜಪೇಯಿ ಸರ್ಕಾರದ ಮೇಲೆ ಬಹಳಷ್ಟು ಒತ್ತಡ ತರುತ್ತಿವೆ. ಆರ್ಥಿಕ ಬೆಳವಣಿಗೆಗಾಗಿ ಯಾವುದೇ ತೀರ್ಮಾನ ಮಹತ್ವದ್ದಿರಲಿ, ಮಹತ್ವದ್ದಿರದಿರಲಿ ಅಂಥ ಮುಖ್ಯ ಆರ್ಥಿಕ ತೀರ್ಮಾನದ ಎದುರಿಗೆ ಆ ಒಕ್ಕೂಟ ಎಷ್ಟು ದುರ್ಬಲವಾಗಿದೆಯೆಂಬುದನ್ನು ತೋರಿಸುತ್ತದೆ.

ಇನ್ನೊಂದು ಸೂಕ್ಷ್ಮ ಸಂವೇದನೆಯ ವಿಷಯ ರಾಜ್ಯಗಳಿಗೆ ಸಂಪನ್ಮೂಲ ಗಳನ್ನು ಹಂಚುವುದು. ದೇಶದಲ್ಲಿ ಕೆಲವೇ ರಾಜ್ಯಗಳು ಆರ್ಥಿಕವಾಗಿ ಮುಂದುವರೆದಿವೆ, ಇನ್ನು ಬಹಳಷ್ಟು ರಾಜ್ಯಗಳು ಹಿಂದುಳಿದಿವೆ. ಹಿಂದುಳಿದ ರಾಜ್ಯಗಳಿಗಾಗಿ ಮುಂದುವರಿದ ರಾಜ್ಯಗಳು ತ್ಯಾಗ ಮಾಡಬೇಕೆಂಬ ಹನ್ನೊಂದನೇ

ಹಣಕಾಸಿನ ಆಯೋಗದ ಶಿಫಾರಸನ್ನು ಅನೇಕ ರಾಜ್ಯಗಳು ತಿರಸ್ಕರಿಸಿವೆ. ವಿದ್ಯುತ್ ಮತ್ತು ಸಾರಿಗೆ ಕ್ಷೇತ್ರಗಳಲ್ಲಿ ಸುಧಾರಣೆ ಮಾಡಬೇಕೆಂದರೆ ಖಾಸಗೀ ವಲಯದಲ್ಲಿಯೂ ಸೇವೆಗಳ ಮೇಲೆ ಆರ್ಥಿಕ ಹೊರೆಯನ್ನು ಹಾಕಬೇಕಾಗುತ್ತದೆ. ಆಗ ಇದು ಕೂಡ ರಾಜಕೀಯ ಸೂಕ್ಷ್ಮ ಸಂವೇದನೆಯ ವಿಷಯವಾಗುತ್ತದೆ. ಆದ್ದರಿಂದ ರಾಷ್ಟ್ರೀಯ ಆಂತರಿಕ ಉತ್ಪಾದನೆಯಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಸಾಧಿಸಲು ಅಗತ್ಯವಾದ ಬಹು ದೊಡ್ಡ ನಿಧಿಯನ್ನು ಸಂಗ್ರಹಿಸುವುದು ಹೇಗೆ ಎಂಬುದೆ ಮೂಲ ಪ್ರಶ್ನೆಯಾಗುತ್ತದೆ. ಖಾಸಗೀ ವಲಯದ ಹಾಗೂ ಸಾರ್ವಜನಿಕ ವಲಯದ ಬಂಡವಾಳಸ್ಥರು ಈ ಬೃಹತ್ ಬೇಡಿಕೆಯನ್ನು ಪೂರೈಸಬಹುದು. ಆದರೆ ಹೂಡಿದ ಬಂಡವಾಳಕ್ಕೆ ಪ್ರತಿಯಾಗಿ ಒಳ್ಳೆಯ ಲಾಭ ಬರುವುದಾದರೆ ಮಾತ್ರ ಖಾಸಗೀ ವಲಯ ಆಸಕ್ತಿವುಳ್ಳದ್ದಾಗುತ್ತದೆಂಬ ಸಂಗತಿಯನ್ನು ನಾವು ಮರೆಯುವಂತಿಲ್ಲ. ಅದೇ ಹೊತ್ತಿಗೆ ಖಾಸಗಿ ಬಂಡವಾಳ ಹೂಡಿಕೆದಾರರು ಸುಲಭವಾದ ಆಮದು – ರಫ್ತು ನೀತಿಯನ್ನು ಅಪೇಕ್ಷಿಸುತ್ತಾರೆ. ಇದು ಕೂಡ ಬಹಳ ಸೂಕ್ಷ್ಮ ಸಂವೇದಾನಶೀಲ ವಿಷಯವಾಗುತ್ತದೆ. ಕೆಲವು ವಲಯಗಳಲ್ಲಿ ಹೊಟ್ಟೆಯುರಿ ಉಂಟಾಗುವ ಸಾಧ್ಯತೆ ಇರುತ್ತದೆ.

ಇಂಥ ವಾಸ್ತವಿಕ ಹಿನ್ನೆಲೆಯಲ್ಲಿ ವ್ಯವಹಾರಿಕವೂ, ತರ್ಕಸಮ್ಮತವೂ ಆದ ಅಭಿಪ್ರಾಯವೇನೆಂದರೆ ಆಂತರಿಕ ಬಜೆಟ್ ಸಂಪನ್ಮೂಲಗಳನ್ನು ಆಧರಿಸಿಯೇ ಸಾಧಾರಣವಾದ, ಆದರೆ, ಸ್ಥಿರಗತಿಯ ರಾಷ್ಟ್ರೀಯ ಆಂತರಿಕ ಉತ್ಪಾದನೆಯ ಬೆಳವಣಿಗೆಯನ್ನು ಅಂಗೀಕರಿಸುವುದು. ಒಂದು ಸಲ ಸರ್ಕಾರವು ದಕ್ಷವೂ ಮತ್ತು ಸೂಕ್ತ ಬೆಲೆನಿಗದಿ ಇರುವ ಅಂತರ್‌ಹಂದರವನ್ನೂ ನಿರ್ಮಿಸಿ ಕೊಟ್ಟರೆ ಮತ್ತು ಮಾರುಕಟ್ಟೆ ಅಭಿಮುಖವಾದ ಆರ್ಥಿಕ ಪರಿಸರವನ್ನೂ ನಿರ್ಮಿಸಿಕೊಟ್ಟರೆ ಆಗ ಆರ್ಥಿಕ ಚಟುವಟಿಕೆಯ ಎಲ್ಲ ಕ್ಷೇತ್ರಗಳಲ್ಲಿ ಖಾಸಗೀ ವಲಯದ ಬಂಡವಾಳವು ತಾನೇ ತಾನಾಗಿ ಧುಮುಕುವುದು. ಅಂಥ ಆರ್ಥಿಕ ಬೆಳವಣಿಗೆಯ ಹಂತದಲ್ಲಿ ಮಾತ್ರ ರಾಷ್ಟ್ರೀಯ ಆಂತರಿಕ ಉತ್ಪಾದನಾ ಬೆಳವಣಿಗೆಯ ಪ್ರಮಾಣವನ್ನು ಉನ್ನತವಾಗಿ ಸಾಧಿಸುವ ಬಗ್ಗೆ ಸರ್ಕಾರವು ಆಶಿಸಬಹುದು. ★

(ಡೆಕ್ಕನ್ ಹೆರಾಲ್ಡ್ ಸಾಭಾರ. ಅನು : ಸು. ಕೌ)

ಬದುಕಿನಲ್ಲಿ ಪುಸ್ತಕ

-ಖುಶ್ವಂತ್ ಸಿಂಗ್

ಒಬ್ಬರ ಬದುಕಿನಲ್ಲಿ ಪುಸ್ತಕಗಳ ಮಹತ್ವವೇನು ? ಇತ್ತೀಚೆಗೆ ದೂರದರ್ಶನದ ಒಬ್ಬ ವರದಿಗಾರ ನನಗೆ ಈ ಪ್ರಶ್ನೆಯನ್ನು ಕೇಳಿದ. ಆಗ ನಾನು ಹೇಳಿದ್ದು ಏನು ಗೊತ್ತೆ? ಪುಸ್ತಕವಿಲ್ಲದ ಮನೆ ಘೋರ ಅಂಧಕಾರದಲ್ಲಿದ್ದಂತೆ ಮತ್ತು ಯಾವ ಮನೆಯಲ್ಲಿ ಒಂದೇ ಒಂದು ಪುಸ್ತಕವಿದೆಯೋ ಆ ಮನೆಯವರೆಲ್ಲ ಒಂದು ಕಣ್ಣಿನ ಕುರುಡರಿದ್ದಂತೆ; ಮತ್ತು ಯಾವ ಮನೆಯಲ್ಲಿ ಬಹಳಷ್ಟು ಪುಸ್ತಕಗಳಿವೆಯೋ ಅಲ್ಲಿ ಬೆಳಕೇ ಬೆಳಕು ಇದ್ದಂತೆ." ಹೀಗೆ ನಾನು ದಿಢೀರನೇ ಸ್ಪಷ್ಟವಾಗಿ ಉತ್ತರಿಸಿದ್ದು ನನಗೇ ಸಂತೋಷವನ್ನುಂಟು ಮಾಡಿತು.

ಸ್ವಲ್ಪ ಹೊತ್ತಾದ ನಂತರ ನಾನು ಹೇಳಿದ್ದನ್ನು ಕುರಿತು ಆಲೋಚಿಸಿದೆ. ಪುಸ್ತಕವಿಲ್ಲದ ಮನೆ ಕತ್ತಲೆಯಲ್ಲಿ ಮುಳುಗಿದಂತೆ ಎಂಬ ಬಗ್ಗೆ ಸಂಶಯವಿರಕೂಡದು. ಆದರೆ ಈ ಬಗ್ಗೆ ಯಾರನ್ನು ದೂರಬೇಕು? ನಮ್ಮ ಜನಸಂಖ್ಯೆಯ ಅರ್ಧಭಾಗ ನಿರಕ್ಷರಸ್ಥವಾಗಿರುವಾಗ ಮತ್ತು ಶೇಕಡಾ ೩೦ ರಷ್ಟು ಜನರು ಪುಸ್ತಕ ಕೊಳ್ಳಲು ಅಸಮರ್ಥರಿರುವಾಗ ಇದೇನು ಆಶ್ಚರ್ಯದ ಸಂಗತಿಯಲ್ಲ. ಮುರಳಿಮನೋಹರ್ ಜೋಷಿ ಮತ್ತು ರಾಜ್ಯಗಳಲ್ಲಿಯ ಅವರಂಥ ಶಿಕ್ಷಣ ಮಂತ್ರಿಗಳ ಅಡಿಯಲ್ಲಿ ಈ ಪರಿಸ್ಥಿತಿ ಸುಧಾರಿಸುವುದೆಂದು ನನಗನಿಸುವುದಿಲ್ಲ. ಏಕೆಂದರೆ ಈ ಎಲ್ಲರೂ ಪ್ರತಿಗಾಮಿ ದೃಷ್ಟಿಯುಳ್ಳವರು. ಇವರು ಭವಿಷ್ಯಶಾಸ್ತ್ರವನ್ನು ಒಂದು ವಿಜ್ಞಾನವೆಂದು ನಂಬುತ್ತಾರೆ.

ಪುಸ್ತಕಗಳೇ ಇಲ್ಲದ ಮನೆಗಿಂತ ಕೇವಲ ಒಂದೇ ಒಂದು ಪುಸ್ತಕ ಇರುವ ಮನೆಗಳ ವಿಷಯ ಹೆಚ್ಚು ಹತಾಶದಾಯಕವಾಗಿದೆ. ಈ ಪರಿಸ್ಥಿತಿ ಯಾರು ಬಹಳ ಧಾರ್ಮಿಕರಾಗಿದ್ದಾರೋ ಅಂಥವರ ಮನೆಯಲ್ಲಿ ಕಂಡುಬರುತ್ತದೆ. ಹಿಂದೂಗಳ ಮನೆಯಲ್ಲಿ ಗೀತೆ, ಮುಸ್ಲಿಂರ ಮನೆಯಲ್ಲಿ ಕುರಾನ್, ಕ್ರಿಶ್ಚನ್‌ರ ಮನೆಯಲ್ಲಿ ಬೈಬಲ್, ಸಿಖ್ಖರ ಮನೆಯಲ್ಲಿ ಗ್ರಂಥಸಾಹಿಬ್ ಇತ್ಯಾದಿ. ಈ ಮನೆಗಳಲ್ಲಿಯ ನಿವಾಸಿಗಳು ಒಂದು ಕಣ್ಣಿನ ಕುರುಡರು. ಅವರಿಗೆ ಬೋಧಿಸಲಾದ ಒಂದು ಸತ್ಯದಂತೆ ಅವರು ಬೆಳೆದಿದ್ದಾರೆ, ಅವರು ಮತಾಂಧರಾಗುತ್ತಾರೆ, ಬೇರೆಯವರ ನಂಬಿಕೆಗಳ ಕುರಿತು ಅಸಹನೆ ಉಳ್ಳವರಾಗುತ್ತಾರೆ ಮತ್ತು ನಮ್ಮ ದೇಶದಲ್ಲಿರುವಂಥ ಬಹುವಿಧ ಧಾರ್ಮಿಕ ಸಂಪ್ರದಾಯದ ಸಮಾಜದೊಂದಿಗೆ ಹೊಂದಿಕೊಳ್ಳಲು ಅಸಮರ್ಥರಾಗುತ್ತಾರೆ. ಆದ್ದರಿಂದ ಒಂದೇ ಒಂದು ಪುಸ್ತಕ ಓದುವವರ ಬಗ್ಗೆ ಎಚ್ಚರವಾಗಿರಿ.


ಇನ್ನು ಬಹಳಷ್ಟು ಪುಸ್ತಕಗಳನ್ನು ಹೊಂದಿದ ಮನೆಗಳಿವೆ. ಅಲ್ಲಿ ಧರ್ಮ, ಮೂಢನಂಬಿಕೆ, ಮಾನವಶಾಸ್ತ್ರ, ಇತಿಹಾಸ, ಸಾಹಿತ್ಯ ಮುಂತಾದ ಅನೇಕ ವಿಷಯಗಳ ಪುಸ್ತಕಗಳಿವೆ. ಆ ಎಲ್ಲ ಪುಸ್ತಕಗಳು ಓದಲಿಕ್ಕಾಗಿ ಇವೆಯೇ ಹೊರತು ತೋರಿಸುವುದಕ್ಕಾಗಿಯಲ್ಲ. ಎನ್ಸೈಕ್ಲೋಪೇಡಿಯಾ, ಹೋಮರ್, ಚೌಸರ್, ಶೇಕ್ಸ್‌ಪಿಯರ್, ಮಿಲ್ಟನ್, ಡಾಂಟೆ, ಗೊಯಥೆ ಮತ್ತು ನಿಮ್ಮ ಇಷ್ಟದ ಇತರ ಲೇಖಕರ ಪುಸ್ತಕಗಳ ಹೆಸರುಗಳನ್ನು ಕೇವಲ ರಟ್ಟುಗಳ ಮೇಲೆ ಅಂದವಾಗಿ ಬರೆಯಿಸಿ ಅವು ನಿಜವಾದ ಪುಸ್ತಕಗಳೇನೋ ಎಂಬಂತೆ ಜೋಡಿಸಿ ಇಡಬಹುದು. ಒಬ್ಬ ಪ್ರಖಾಂಡ ಪಂಡಿತನ ಪುಸ್ತಕಗಳಂತೆ ಅವು ಕಾಣುತ್ತವೆ. ಇಂಥವೇನಾದರೂ ನೀವು ಹೊಂದಿದ್ದರೆ ನೀವು ಬಾಯಿಬಿಡದಂತೆ ಎಚ್ಚರ ವಹಿಸಿ.

ಪುಸ್ತಕಗಳ ಬಗ್ಗೆ ಮಾತನಾಡುವಾಗ ನನ್ನ ಅತ್ಯಂತ ಕಿರಿಯ ತಮ್ಮ ನೆನಪಾಗುತ್ತಾನೆ. ಈಗ ಕೆಲವು ವರ್ಷಗಳ ಹಿಂದೆ ಅವನು ಸತ್ತುಹೋದ. ಅವನು ತನ್ನ ಜೊತೆಯವರಿಗಿಂತ ಉತ್ತಮ ವಿದ್ಯಾರ್ಥಿಯಾಗಿದ್ದ, ಆದರೆ ಆತ ಪುಸ್ತಕಗಳು ಶಾಲೆ ಮತ್ತು ಕಾಲೇಜುಗಳಿಗೆ ಮಾತ್ರ ಸಂಬಂಧಿಸಿದವು ಎಂದು ಭಾವಿಸಿದ್ದ. ಅವನು ಒಂದು ಹುಡುಗಿಯ ಪ್ರೇಮಪಾಶದಲ್ಲಿ ಸಿಕ್ಕಿಹಾಕಿಕೊಂಡ. ಅವಳ ಜನ್ಮದಿನದಂದು ಯಾವ ಕಾಣಿಕೆ ಕೊಡಬೇಕೆಂಬ ಬಗ್ಗೆ ಅವನು ಬಹಳ ಗೊಂದಲದಲ್ಲಿ ಬಿದ್ದಿದ್ದ. ಅವಳ ಬಳಿ ಸೂಕ್ತ ಕಾಣಿಕೆ ಎಂದು ತಿಳಿಯಲಾಗಿದ್ದ ಎಲ್ಲ ಪದಾರ್ಥಗಳೂ ಇದ್ದವು. ಅವನು ನನ್ನ ಸಲಹೆ ಕೇಳಿದ, "ನೀನು ಬೇರೆ ಏನನ್ನೂ ಯೋಚಿಸಲಾರೆಯಾದರೆ ಅವಳಿಗೆ ಒಂದು ಪುಸ್ತಕ ಕೊಡು" ಎಂದು ನಾನು ಸೂಚಿಸಿದೆ. ಅವನು ನನ್ನ ಸಲಹೆಯನ್ನು ತಿರಸ್ಕರಿಸಿದ, ಆತ ಹೇಳಿದ, ಅವಳ ಬಳಿ ಈಗಾಗಲೇ ಒಂದು ಪುಸ್ತಕ ಇದೆ." ಪುಸ್ತಕಗಳೆಂದರೆ ಜೀವನದುದ್ದಕ್ಕೂ ಇರಬೇಕಾದ ಒಂದು ವ್ಯಸನ. "ನಾನು ಸಾಕಷ್ಟು ಓದಿದ್ದೇನೆ" ಎಂದು ನೀವು ಎಂದೂ ಹೇಳಲಾರಿರಿ.

ಈಗ ನಾವು ಹಬ್ಬಗಳ ಸುಗ್ಗಿಯಲ್ಲಿದ್ದೇವೆ. ದುರ್ಗಾಪೂಜಾ, ದಸರಾ, ದೀಪಾವಳಿ, ಗುರುನಾನಕರ ಜನ್ಮದಿನ ಕ್ರಿಸ್‌ಮಸ್. ಒಳ್ಳೆಯದಕ್ಕಿಂತ ಕೆಟ್ಟದನ್ನೇ ಮಾಡುವ ಸಿಹಿಯನ್ನು ಬಾಕ್ಸ್‌ತುಂಬ ಕೊಡುವುದಕ್ಕಿಂತ ಒಳ್ಳೆಯ ಪುಸ್ತಕದ ಕಾಣಿಕೆ ಕೊಡುವುದೇ ನಿಮ್ಮ ಆದ್ಯತೆಯಾಗಿರಲಿ. ಅದು ಅದನ್ನು ಪಡೆದವನ ಜೀರ್ಣಶಕ್ತಿಯನ್ನು ಕೆಡಿಸುವುದಿಲ್ಲ. ಬದಲಿಗೆ ಅದು ಅವರ ಮನಸ್ಸನ್ನು ಬೆಳಗಿಸುತ್ತದೆ. ಮತ್ತು ಅವರ ಬದುಕಿನ ಕೊನೆಯವರೆಗೂ ಉಳಿದಿರುತ್ತದೆ.

(ಡೆಕ್ಕನ್ ಹೆರಾಲ್ಡ್ ಸಾಭಾರ) ★ (ಅನು : ಸು. ಕೌ.)

KA-SK-MND-470/2000 ತೆರೆದ-ಅಂಚೆ



ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಜನಪದ
ಸೇವಾ ಟ್ರಸ್ಟ್ ಮುದ್ರಣಾಲಯ ಮೇಲುಕೋಟೆಯಲ್ಲಿ ಸಂಪಾದಿತವಾಗಿ,
ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.